ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 50 2023

ಬುಧವಾರ, ಫೆಬ್ರವರಿ 07, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 266 RNI : 27369/75

janathavani@mac.com
www.janathavani.com
☎ 08192 254736 91642 99999

## ಇಂದು ಕೇಂದ್ರದ ವಿರುದ್ಧ ರಾಜ್ಯ ಸರ್ಕಾರ ಪ್ರತಿಭಟನೆ

ಬೆಂಗಳೂರು, ಫೆ. 6 – ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂದು ಪ್ರತಿಭಟಿಸಿ, ಇತಿಹಾಸದಲ್ಲೇ ಮೊದಲ ಬಾರಿಗೆ ಕರ್ನಾಟಕ ರಾಜ್ಯ ಸರ್ಕಾರ ದೆಹಲಿಯಲ್ಲಿ ನಾಳೆ ಇಡೀ ದಿನ ಧರಣಿ, ಪ್ರತಿಭಟನೆ ನಡೆಸುತ್ತಿದೆ.

ಸರ್ಕಾರದ ಈ ನಿಲುವನ್ನು ಪ್ರತಿಪಕ್ಷಗಳು ರಾಜಕೀಯ ಪ್ರೇರಿತ ಎನ್ನುವುದರ ಜೊತೆಗೆ, ಅಯೋಧ್ಯೆಯ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆಯ ಯಶಸ್ಸು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸಿನ ಓಟಕ್ಕೆ ಕಡಿವಾಣ ಹಾಕಲು ಇಂಡಿಯಾ ಒಕ್ಕೂಟಕ್ಕೆ ಸೇರಿದ ರಾಜ್ಯಗಳ ಮುಖ್ಯಮಂತ್ರಿಗಳು ಸಾರ್ವ ಜನಿಕರ ಗಮನ ಬೇರೆಡೆ ಸೆಳೆಯಲು ಮಾಡುತ್ತಿರುವ ಹೋರಾಟ ಇದಾಗಿದೆ ಎಂದು ಹೇಳಿವೆ.

ಒಂದಲ್ಲಾ ಒಂದು ಕಾರಣಕ್ಕೆ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು, ಇಲ್ಲವೇ ಆ ರಾಜ್ಯದ ಸಂಸದರು ಪ್ರತಿಭಟನೆಗಳನ್ನು ಸಾಂಕೇತಿಕವಾಗಿ ನಡೆಸಿರುವ ಉದಾಹರಣೆಗಳಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಹಾಗೂ ಕಾಂಗ್ರೆಸ್ ಪಕ್ಷದ ಎಲ್ಲಾ ಹಂತದ ಜನಪ್ರತಿನಿಧಿಗಳು ನಾಳೆ ಕೇಂದ್ರದ ವಿರುದ್ಧ ದೆಹಲಿಯ ಜಂತರ ಮಂತರ್‌ನಲ್ಲಿ ಧರಣಿ ನಡೆಸಿ, ರಾಷ್ಟ್ರದ ಗಮನ ಸೆಳೆಯಲು ಮುಂದಾಗಿದ್ದಾರೆ.

ಪ್ರಧಾನಿ ನರೇಂದ್ರ (5ನೇ ಪುಟಕ್ಕೆ)

## ಮಲತಾಯಿ ಧೋರಣೆ ಇಲ್ಲ : ಕೇಂದ್ರ ಸರ್ಕಾರ

ನವದೆಹಲಿ, ಫೆ. 6 – ವಿಕೋಪ ಪರಿಹಾರ ನಿಧಿ ವಿತರಿಸುವಲ್ಲಿ ಬಿಜೆಪಿ ಯೇತರ ರಾಜ್ಯಗಳ ಜೊತೆ ಮಲತಾಯಿ ಧೋರಣೆ ಅನುಸರಿಸಲಾಗುತ್ತಿದೆ ಎಂಬ ಆರೋಪವನ್ನು ಕೇಂದ್ರ ಸರ್ಕಾರ ತಳ್ಳಿ ಹಾಕಿದೆ.

ತಮಿಳುನಾಡಿಗೆ ಪ್ರವಾಹ ಪರಿಹಾರ ನೀಡುವ ಕುರಿತು ಲೋಕಸಭೆಯಲ್ಲಿ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಕೇಂದ್ರ ಗೃಹ ಖಾತೆ ಅಧೀನ ಸಚಿವ ನಿತ್ಯಾನಂದ ರಾಯ್, ನೈಸರ್ಗಿಕ ವಿಕೋಪದ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರಗಳ ಅಗತ್ಯದ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅತೀವ ಸಂವೇದನೆ ಹೊಂದಿದ್ದಾರೆ. ಕೇಂದ್ರ ಸರ್ಕಾರ ಯಾವುದೇ ಸಂಕಷ್ಟದ ಸಮಯದಲ್ಲಿ ಎಲ್ಲ ರೀತಿಯ ನೆರವುಗಳನ್ನು ನೀಡುತ್ತಿದೆ ಎಂದರು. ತಮಿಳುನಾಡು ಸರ್ಕಾರದ ಬಳಿ ಈಗಲೂ 2013 ಕೋಟಿ ರೂ.ಗಳ ಎಸ್.ಡಿ.ಆರ್.ಎಫ್. ನಿಧಿ ಲಭ್ಯವಿದೆ. ಇದನ್ನು ಬಳಸಬಹುದು ಎಂದೂ ಅವರು (2ನೇ ಪುಟಕ್ಕೆ)

## 29 ರೂ. ದರದಲ್ಲಿ ಅಕ್ಕಿ ಮಾರಾಟಕ್ಕೆ ಕೇಂದ್ರ ಚಾಲನೆ

ನವದೆಹಲಿ, ಫೆ. 6 – ಅಕ್ಕಿಯನ್ನು ಕೆ.ಜಿ.ಗೆ 29 ರೂ. ದರದಲ್ಲಿ ಮಾರಾಟ ಮಾಡುವ ಯೋಜನೆಗೆ ಕೇಂದ್ರ ಸರ್ಕಾರ ಚಾಲನೆ ನೀಡಿದೆ. 'ಭಾರತ್ ರೈಸ್' ಬ್ರಾಂಡ್ ಹೆಸರಿನಲ್ಲಿ ಅಕ್ಕಿ ಮಾರಾಟ ಮಾಡಲಾಗುವುದು.

5 ಕೆಜಿ ಹಾಗೂ 10 ಕೆಜಿ ಪೊಟ್ಟಣಗಳಲ್ಲಿ ಅಕ್ಕಿ ಮಾರಾಟ ಮಾಡಲಾಗುವುದು ಎಂದು ಕೇಂದ್ರ ಆಹಾರ ಸಚಿವ ಪಿಯೂಶ್ ಗೋಯಲ್ ತಿಳಿಸಿದ್ದಾರೆ. ಅಕ್ಕಿ ಬೆಲೆ ಏರಿಕೆ ತಡೆಯುವ ಸಲುವಾಗಿ ಕೇಂದ್ರ ಸರ್ಕಾರ ಈ ಕ್ರಮ (5ನೇ ಪುಟಕ್ಕೆ)

## ಉತ್ತರಾಖಂಡದಲ್ಲಿ ಏಕರೂಪ ನಾಗರಿಕ ಸಂಹಿತೆ ಮಸೂದೆ ಮಂಡನೆ

**ಲಿವ್ ಇನ್ ಸಂಬಂಧದ ನೋಂದಣಿ ಕಡ್ಡಾಯ**

ಡೆಹರಾಡೂನ್, ಫೆ. 6 – ಉತ್ತರಾಖಂಡ ಸರ್ಕಾರ ಏಕರೂಪ ನಾಗರಿಕ ಸಂಹಿತೆ ಮಸೂದೆಯನ್ನು ವಿಧಾನಸಭೆ ಯಲ್ಲಿ ಮಂಡಿಸಿದೆ. ಸ್ವಾತಂತ್ರ್ಯಾನಂತರ ರಾಜ್ಯವೊಂದು ಈ ರೀತಿ ಕ್ರಮಕ್ಕೆ ಮುಂದಾಗಿರುವುದು ಇದೇ ಮೊದಲು.

ರಾಜ್ಯದ ಬುಡಕಟ್ಟು ಸಮುದಾಯವನ್ನು ಪ್ರಸ್ತಾಪಿತ ಕಾಯ್ದೆ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಅಲ್ಲದೇ, ಲಿವ್ - ಇನ್ ಸಂಬಂಧದ ನೋಂದಣಿ ಕಡ್ಡಾಯಗೊಳಿಸಲಾಗಿದೆ. ಲಿವ್ - ಇನ್ ಸಂಬಂಧ ದಿಂದ ಜನಿಸಿದ ಮಕ್ಕಳನ್ನು ಕಾನೂನು ಬದ್ಧ ಎಂದು ಪರಿಗಣಿಸಲಾಗು ವುದು. ಪರಿತ್ಯಕ್ತವಾದ ಮಹಿಳೆಗೆ (5ನೇ ಪುಟಕ್ಕೆ)

## ಪಿಎಂ - ಕಿಸಾನ್ ನಿಧಿ ಹೆಚ್ಚಳವಿಲ್ಲ

ನವದೆಹಲಿ ಫೆ. 6 – ಪಿ.ಎಂ. - ಕಿಸಾನ್ ಯೋಜನೆಯಡಿ ರೈತರಿಗೆ ಪ್ರತಿ ವರ್ಷ ನೀಡಲಾಗುತ್ತಿರುವ 6,000 ರೂ.ಗಳನ್ನು ಹೆಚ್ಚಿಸುವ ಯಾವುದೇ ಪ್ರಸ್ತಾವನೆ ಇಲ್ಲ ಎಂದು ಕೇಂದ್ರ ಸರ್ಕಾರ ಸಂಸತ್ತಿಗೆ ತಿಳಿಸಿದೆ. ಈ ಯೋಜನೆಯಡಿ (2ನೇ ಪುಟಕ್ಕೆ)

## ಮಾನವೀಯತೆ ಮೆರೆದ ಡ್ರೈವರ್ ದಾದಾಪೀರ್



ಬಾತಿ ಕೆರೆಯ ಮೇಲೆ ರೋಡ್ ಹಂಪ್‌ಗಳು ಕಾಣಿಸದೇ ದ್ವಿಚಕ್ರ ವಾಹನ ಸವಾರರು ಅಪಘಾತಗಳಿಗೆ ಗುರಿಯಾಗಿ ಸಾವು-ನೋವು ಅನುಭವಿಸುವುದನ್ನು ನೋಡಲಾಗದೆ **ಅಶ್ವಿನಿ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ಡಾ. ಹಿರೇಮಠ್‌ರವರ ಡ್ರೈವರ್ ಆದ ದಾದಾಪೀರ್** ಸ್ವತಃ ಹಂಪ್ಸ್‌ಗಳಿಗೆ ಬಿಳಿ ಬಣ್ಣ ಬಳಿದು ಮಾನವೀಯತೆ ಮೆರೆದು, ಸಾರ್ವಜನಿಕರ ಪ್ರಶಂಸೆಗೆ ಪಾತ್ರರಾಗಿದ್ದಾರೆ.

## ಎನ್.ಜಿ. ಶಿವರಾಮಪ್ಪ ನೀಲಗುಂದ ನಿಧನ



ದಾವಣಗೆರೆ ನಿಟುವಳ್ಳಿ ಮೇನ್ ರೋಡ್, 9ನೇ ಕ್ರಾಸ್, ಕೆ.ಟಿ.ಜೆ. ನಗರ ನಿವಾಸಿ
ಶ್ರೀರಾಮ ಸ್ಟೋರ್ ಮತ್ತು ನೀಲಗುಂದ ಗ್ರೂಪ್ಸ್ ಸಂಸ್ಥಾಪಕರಾದ
**ಎನ್.ಜಿ. ಶಿವರಾಮಪ್ಪ ನೀಲಗುಂದ**
(85 ವರ್ಷ) ದಿನಾಂಕ : 6.2.2024 ರ ಮಂಗಳವಾರದಂದು ಬೆಳಿಗ್ಗೆ 9.32ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಅಂದೇ (6.2.2024) ಸಂಜೆ ನಗರದ ಲೇಬರ್ ಕಾಲೋನಿಯ ಆರ್.ಹೆಚ್. ಬೃಂದಾವನದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.
ಇಂತಿ ದುಃಖತಪ್ತ ಕುಟುಂಬ ವರ್ಗ, ಫೋನ್ : 9880335888

## 19ನೇ ವರ್ಷದ ಚಿರಸ್ಮರಣೆ




**ದಿ|| ಎಂ.ಕೆ. ಕಮಲಮ್ಮನವರು**
(ದಿ|| ಎಂ. ಕನ್ನಪ್ಪನವರ ಧರ್ಮಪತ್ನಿ)
ನಂದಾದೀಪದ ಹಾಗೆ ನಮ್ಮ ಮನೆ, ಮನಗಳನ್ನು ಬೆಳಗಿದ ನೀವು ನಮ್ಮನ್ನಗಲಿ ಇಂದಿಗೆ 19 ವರ್ಷಗಳಾದವು. ವಾತ್ಸಲ್ಯಮಯಿ ತಾಯಿಯಾಗಿ ಎಲ್ಲರ ಅಕ್ಕರೆಗೂ ಪಾತ್ರರಾಗಿದ್ದ ನೀವು ನಿತ್ಯ ಸ್ಮರಣೀಯರಾಗಿದ್ದೀರಿ.
ಪುತ್ರ : ಎಂ.ಕೆ. ಮಲ್ಲಿಕಾರ್ಜುನ ಮತ್ತು ಕುಟುಂಬದವರು ಹಾಗೂ ಬಂಧು-ಮಿತ್ರರು, ದಾವಣಗೆರೆ.

ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ

ಬ್ಯಾಂಕಿನ ಷೇರುದಾರರು / ಮತದಾರರಾದ ತಮ್ಮಲ್ಲಿ ಜಯಪ್ರಕಾಶ್ ಎಂ. ವಿ. ಮಾಡುವ ನಮಸ್ಕಾರಗಳು

ಮಾನ್ಯರೆ, ದಿನಾಂಕ 11-02-2024 ರ ಭಾನುವಾರ ಬ್ಯಾಂಕಿನ ಚುನಾವಣೆ ನಡೆಯಲಿದ್ದು ನಾನು ಈ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದು ತಮ್ಮಗಳ ಸೇವೆ ಮಾಡಲು ಅವಕಾಶ ನೀಡ ಬೇಕಾಗಿ ವಿನಂತಿ. ಆದ್ದರಿಂದ ತಾವುಗಳು ಮತದಾನ ಮಾಡುವಾಗ ನಿಮ್ಮ ಮತವನ್ನು ನನಗೂ ಒಂದು ನೀಡಿ ಎಂದು ಪ್ರೀತಿಯಿಂದ ವಿನಮ್ರವಾಗಿ ಕೇಳಿಕೊಳ್ಳುತ್ತೇನೆ.

ಸಾಮಾನ್ಯ ಕ್ಷೇತ್ರದ ಅಭ್ಯರ್ಥಿ ಜಯಪ್ರಕಾಶ್ ಎಂ. ವಿ.



-: ಇಂತಿ ನಿಮ್ಮ ಸೇವಕ :-
**ಜಯಪ್ರಕಾಶ್ ಎಂ. ವಿ.**
(ಜಯಪ್ರಕಾಶ್ ಮಾಗಿ)
ಮಾಲೀಕರು, ಹರ್ಷ ಕಮರ್ಷಿಯಲ್ಸ್, ಜೆ.ಪಿ. ಎಂಟರ್‌ಪ್ರೈಸಸ್, ರೈಸ್ ಕಾರ್ನರ್
ನಿರ್ದೇಶಕರು, ದಾವಣಗೆರೆ ಜಿಲ್ಲಾ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ
ಅಧ್ಯಕ್ಷರು, ಚೌಕಿಪೇಟೆ ಅಕ್ಕಿ ವರ್ತಕರ ಸಂಘ, ದಾವಣಗೆರೆ. ಹಿಂದೂ ಮಹಾಗಣಪತಿ ಟ್ರಸ್ಟಿ, ದಾವಣಗೆರೆ.
ಉಪಾಧ್ಯಕ್ಷರು, ಬನ್ನಿ ಮಹಾಕಾಳಿ ಸೇವಾ ಸಮಿತಿ, ದೇವರಾಜ ಅರಸು ಬಡಾವಣೆ ಹಾಗೂ ಶ್ರೀ ಶಬರಿಗಿರೀಶ ಸೇವಾ ಸಮಿತಿ (ರಿ.) ಶಿವಾಲಿ ರಸ್ತೆ
Mob. : 9449807696, 7259407696

ಚುನಾವಣೆ 2024 :-
ಸಾಮಾನ್ಯ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದೇನೆ

ದಿನಾಂಕ : 11-02-2024 ರ ಭಾನುವಾರ
ಸಮಯ : ಬೆಳಗ್ಗೆ 09 ರಿಂದ ಸಂಜೆ 04 ರವರೆಗೆ
ಸ್ಥಳ : ಮೋತಿ ವೀರಪ್ಪ ಕಾಲೇಜು ಆವರಣ.

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | ಚಿಹ್ನೆ | |
|---|---|---|---|
| 8 | ಜಯಪ್ರಕಾಶ್ ಎಂ. ವಿ. |  | |



"ಮತ ನಿಮ್ಮದು ಸೇವೆ ನನ್ನದು"

ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ

ಆಡಳಿತ ಮಂಡಳಿ ಚುನಾವಣೆ-2024

ಮಾನ್ಯ ಗೌರವಾನ್ವಿತ ಷೇರುದಾರರಲ್ಲಿ ವಿನಂತಿ

ದಿನಾಂಕ : 11.02.2024ರ ಭಾನುವಾರ ನಡೆಯಲಿರುವ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ಗುರುರಾಜ್ ಎನ್.ಎ. ಹಾಗೂ ಬೆಳ್ಳೂಡಿ ಮಂಜುನಾಥ್ ಆದ ನಾವು ಗುರು-ಹಿರಿಯರ ಹಾಗೂ ತಮ್ಮೆಲ್ಲರ ಆಶೀರ್ವಾದದೊಂದಿಗೆ ನಿರ್ದೇಶಕರ ಸ್ಥಾನಗಳಿಗೆ ಸ್ಪರ್ಧಿಸುತ್ತಿದ್ದೇವೆ. ಬ್ಯಾಂಕಿನ ಅಭಿವೃದ್ಧಿ ಮತ್ತು ಬ್ಯಾಂಕಿನ ಸದಸ್ಯರಾದ ತಮ್ಮೆಲ್ಲರ ಸೇವೆ ಮಾಡುವ ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

| | | | |
|---|---|---|---|
| 7 | ಗುರುರಾಜ್ ಎನ್.ಎ. ಸಾಮಾನ್ಯ ವರ್ಗ |  |  |
| 14 | ಬೆಳ್ಳೂಡಿ ಮಂಜುನಾಥ್ ಹಿಂದುಳಿದ ವರ್ಗ/ಪ್ರವರ್ಗ ಬಿ. ಮೀಸಲು |  |  |



ಧನ್ಯವಾದಗಳೊಂದಿಗೆ,
ತಮ್ಮ ಸೇವಾಕಾಂಕ್ಷಿ : ಗುರುರಾಜ್ ಎನ್.ಎ.
(ನಾಗೂರು ಅಡಿವೆಪ್ಪನವರ ಮಗ)
ಎಪಿಎಂಸಿ ಮಾಜಿ ನಿರ್ದೇಶಕರು, ಫೋ. : 93438 12345
ತಮ್ಮ ಸೇವಾಕಾಂಕ್ಷಿ : ಬೆಳ್ಳೂಡಿ ಮಂಜುನಾಥ್
(ಮುದ್ದಳ್ಳಿ ವೀರಣ್ಣನವರ ಮಗ)
ಫೋ. : 99722 85497



ಚುನಾವಣೆ ದಿನಾಂಕ : 11.02.2024, ಭಾನುವಾರ
ಸಮಯ : ಬೆಳಿಗ್ಗೆ 9.00 ರಿಂದ ಸಂಜೆ 4.00
ಸ್ಥಳ : ಮೋತಿ ವೀರಪ್ಪ ಕಾಲೇಜ್ ಆವರಣ, ದಾವಣಗೆರೆ.



South India's Top of the line Diamond Jewellery Exhibition & Sale!

VISHWA VAJRAH
DIAMOND EXHIBITION
TILL 11 FEBRUARY

ಸುಲ್ತಾನ್ ಡೈಮಂಡ್ಸ್ & ಗೋಲ್ಡ್

ONLY AT
Sulthan Diamonds & Gold
Davanagere Showroom
Shramajeevi Complex, Opp. RMC Link Road,
P.B. Road. Ph: 08192 251916, 252916

ಫ್ಲಾಟ್ ₹8000 ಕಡಿತ ಪ್ರತಿ ಡೈಮಂಡ್ ಕ್ಯಾರೆಟ್‌ನ ಮೇಲೆ

• Davanagere • Shivamogga • Bangalore (Ulsoor & Jayanagar) • Mangalore • Surathkal • Udupi • Kasaragod • Kanhangad




# ಈ ಬಾರಿಯ ವಾಲ್ಮೀಕಿ ಜಾತ್ರೆಗೆ ಸಿನಿಮಾ ನಟರನ್ನು ಕರೆದಿಲ್ಲ

ಮಲೇಬೆನ್ನೂರು, ಫೆ.6- ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಇದೇ ದಿನಾಂಕ 8 ಮತ್ತು 9 ರಂದು ಜರುಗಲಿರುವ 6ನೇ ವರ್ಷದ ವಾಲ್ಮೀಕಿ ಜಾತ್ರೆಗೆ ಸಿದ್ಧತೆಗಳು ಭರದಿಂದ ಸಾಗಿದ್ದು, ಶ್ರೀಗಳೇ ಖುದ್ದು ನಿಂತು ಸಿದ್ಧತೆಗಳಿಗೆ ಅಂತಿಮ ರೂಪ ನೀಡಲು ನಿರ್ದೇಶನ ನೀಡುತ್ತಿದ್ದಾರೆ.

ಏತನ್ಮಧ್ಯೆ ಮಂಗಳವಾರ ಶ್ರೀಮಠದಲ್ಲಿ ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರೊಂದಿಗೆ ಮಾತನಾಡಿದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು, ಈ ಬಾರಿಯ ವಾಲ್ಮೀಕಿ ಜಾತ್ರೆಗೆ ಸಿನಿಮಾ ನಟರಿಗೆ ಆಮಂತ್ರಣ ನೀಡಿಲ್ಲ ಎಂದು ಸ್ಪಷ್ಟಪಡಿಸಿದರು.

ನಾವು ವಾಲ್ಮೀಕಿ ಜಾತ್ರೆಯನ್ನು ಜಾಗೃತಿಗಾಗಿ ಮಾಡುತ್ತಿದ್ದು, ಜಾತ್ರೆ ಮೂಲಕ ಸಂವಿಧಾನ ಬದ್ಧ ಹಕ್ಕುಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಗೊಳಿಸುವಂತೆ ಸರ್ಕಾರಕ್ಕೆ ಹಕ್ಕೊತ್ತಾಯ ಮಾಡುತ್ತಾ ಬಂದಿದ್ದೇವೆ. ಇದರಿಂದ ಕೆಲವು ಒತ್ತಾಯಗಳಿಗೆ ಸ್ಪಂದನೆ ಸಿಕ್ಕಿದೆ. ಈ ವರ್ಷದ ಜಾತ್ರೆಯಲ್ಲಿ ಎಸ್ಸಿ-ಎಸ್ಟಿ ನಕಲಿ ಜಾತಿ ಪ್ರಮಾಣ ಪತ್ರ ನೀಡುವುದನ್ನು ನಿಲ್ಲಿಸುವಂತೆ ಮತ್ತು ನಕಲಿ ಜಾತಿ ಪ್ರಮಾಣ ಪತ್ರ ಪಡೆದವರಿಗೆ ಹಾಗೂ ನೀಡಿದವರಿಗೆ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯ ಮಾಡಲಾಗುವುದು.

ಜೊತೆಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವಂತೆ ಮತ್ತು ರಾಜ್ಯದಲ್ಲಿ ಬುಡಕಟ್ಟು ವಿಶ್ವವಿದ್ಯಾನಿಲಯ ಸ್ಥಾಪಿಸುವಂತೆ ಆಗ್ರಹಿಸಲಾಗುವುದು.




**ಈ ವರ್ಷ ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯದ ಕುಲಪತಿಗಳಾದ ನಾಡೋಜ ಪ್ರೊ. ತೇಜಸ್ವಿ ಕಟ್ಟಿಮನಿ, ರಂಗರಾಜು ವನದುರ್ಗ ಅವರಿಗೆ 'ವಾಲ್ಮೀಕಿ ರತ್ನ' ಪ್ರಶಸ್ತಿ ಮತ್ತು ಖ್ಯಾತ ಸಾಹಿತಿ ಬಿ.ಎಲ್.ವೇಣು ಅವರಿಗೆ 'ಮದಕರಿ ನಾಯಕ' ಪ್ರಶಸ್ತಿ ಪ್ರದಾನ ಮಾಡಲಾಗುವುದೆಂದು ಸ್ವಾಮೀಜಿ ಪ್ರಕಟಿಸಿದರು.**

ರಾಜ್ಯ ಸರ್ಕಾರ ಹೆಚ್ಚಳ ಮಾಡಿರುವ ಎಸ್ಸಿ-ಎಸ್ಟಿ ಮೀಸಲಾತಿ ಪ್ರಮಾಣವನ್ನು 9 ಷೆಡ್ಯೂಲ್‌ಗೆ ಸೇರಿಸುವಂತೆ ಮತ್ತು ಅಯೋಧ್ಯೆಯಲ್ಲಿ ಲೋಕಾರ್ಪಣೆಗೊಂಡಿರುವ ಶ್ರೀರಾಮ ಮಂದಿರದಲ್ಲಿ ವಾಲ್ಮೀಕಿ, ಶಬರಿ, ಭಗೀರಥ, ವಶಿಷ್ಟ ಋಷಿಗಳ ಮೂರ್ತಿಗಳನ್ನು ಪ್ರತಿಷ್ಠಾಪಿಸುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಲಾಗುವುದೆಂದು ಸ್ವಾಮೀಜಿ ತಿಳಿಸಿದರು.

ಕಳೆದ 2 ತಿಂಗಳಲ್ಲಿ 30 ಜಿಲ್ಲೆಗಳಲ್ಲಿ 175 ತಾಲ್ಲೂಕುಗಳಲ್ಲಿ ಪ್ರವಾಸ ಮಾಡಿ, ಭಕ್ತರನ್ನು ಜಾತ್ರೆಗೆ ಆಹ್ವಾನಿಸಿ ಬಂದಿದ್ದೇವೆ. ಪ್ರತಿ ತಾಲ್ಲೂಕಿನಲ್ಲಿ 5 ಜನ ವಿಎಸ್‌ಎಸ್ ಪದಾಧಿಕಾರಿಗಳನ್ನು ನೇಮಕ ಮಾಡಿದ್ದು, ಜಾತ್ರೆಯ ಕರಪತ್ರ, ಪೋಸ್ಟರ್‌ಗಳನ್ನು ತಲುಪಿಸುವುದು ಮತ್ತು ಜಾತ್ರೆಗೆ ಭಕ್ತರು ಭಕ್ತಿಯಿಂದ ನೀಡುವ ಕಾಣಿಕೆಯನ್ನು ಸಂಗ್ರಹಿಸಿ ಮಠಕ್ಕೆ ತಂದು ಒಪ್ಪಿಸುವ ಜವಾಬ್ದಾರಿಯನ್ನು ಅವರಿಗೆ ನೀಡಲಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲೇ ಈ ಸಮಾಜ ನಾಡು-ನುಡಿಗಾಗಿ ಹೋರಾಟ, ಬಲಿದಾನ ಮಾಡಿದ್ದು, ಸ್ವಾತಂತ್ರ್ಯ ನಂತರ ನಮ್ಮ ಜನರು ಮುಖ್ಯವಾಹಿನಿಗೆ ಬರುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ ಡಾ. ಅಂಬೇಡ್ಕರ್ ಅವರು, ನೀಡಿದ ಸಂವಿಧಾನ ಎಂದು ಹೆಮ್ಮೆಯಿಂದ ಹೇಳುತ್ತೇವೆ. ಮೀಸಲಾತಿ, ಶಿಕ್ಷಣ, ರಾಜಕೀಯ ಪ್ರಾತಿನಿಧ್ಯ ದಿಂದಾಗಿ ನಾಯಕ ಸಮಾಜಕ್ಕೆ ಅನುಕೂಲ ವಾಗಿದೆ ಎಂದು ಸ್ವಾಮೀಜಿ ಹೇಳಿದರು.

ನಾಳೆ ಗುರುವಾರ ಮತ್ತು ಶುಕ್ರವಾರ ಜರುಗುವ 6ನೇ ವರ್ಷದ ವಾಲ್ಮೀಕಿ ಜಾತ್ರೆ ಅರ್ಥಪೂರ್ಣವಾಗಲಿದ್ದು, 2 ರಿಂದ 3 ಲಕ್ಷ ಜನ ಜಾತ್ರೆಯ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ.

ಗುರುವಾರ ವಿವಿಧ ವಿಚಾರಗೋಷ್ಠಿಗಳನ್ನು ಹಾಗೂ ಸಾಂಸ್ಕೃತಿಕ ಉತ್ಸವವನ್ನು ಆಯೋಜಿಸಲಾಗಿದ್ದು, ಶುಕ್ರವಾರ ಬೆಳಿಗ್ಗೆ 9ಕ್ಕೆ ವಿವಿಧ ಮಠಾಧೀಶರ ಸಾನ್ನಿಧ್ಯದಲ್ಲಿ ವಾಲ್ಮೀಕಿ ತೇರು ಹರಿಯಲಿದೆ.

**ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ**

ಸಮಾವೇಶದಲ್ಲಿ ಸಿಎಂ ಸಿದ್ದರಾಮಯ್ಯ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆಂದು ಸ್ವಾಮೀಜಿ ತಿಳಿಸಿದರು.

**ಎಸ್ಪಿ ಭೇಟಿ :** ವಾಲ್ಮೀಕಿ ಜಾತ್ರೆ ಹಿನ್ನಲೆಯಲ್ಲಿ ಎಸ್ಪಿ ಉಮಾ ಪ್ರಶಾಂತ್ ಅವರು, ಮಂಗಳವಾರ ಮಠಕ್ಕೆ ಆಗಮಿಸಿ ವೇದಿಕೆ, ಹೆಲಿಪ್ಯಾಡ್, ಊಟದ ಸ್ಥಳ ಮತ್ತು ವಾಹನಗಳ ಪಾರ್ಕಿಂಗ್ ಪರಿಶೀಲಿಸಿದರು.

ನಂತರ ಶ್ರೀಗಳ ಜೊತೆ ಜಾತ್ರೆಯ ಕಾರ್ಯಕ್ರಮಗಳು ಮತ್ತು ಜಾತ್ರೆಗೆ ಬರುವ ಗಣ್ಯರ, ಮಠಾಧೀಶರ ಹಾಗೂ ಜನರ ಬಗ್ಗೆ ಮಾಹಿತಿ ಪಡೆದುಕೊಂಡು ಸೂಕ್ತ ಬಂದೋಬಸ್ತ್ ಕಲ್ಪಿಸುವ ವಿಚಾರವಾಗಿ ಪೊಲೀಸ್ ಅಧಿಕಾರಿಗಳ ಸಭೆಯನ್ನೂ ನಡೆಸಿದರು.

ವಾಣಿಜ್ಯ ಇಲಾಖೆಯ ಉಪ ಆಯುಕ್ತ ಹೆಚ್.ಎಸ್.ಮಂಜುನಾಥ್, ಡಿವೈಎಸ್ಪಿ ಬಸವರಾಜ್, ಸಿಪಿಐ ಸುರೇಶ್ ಸಿಗರಿ, ಪಿಎಸ್‌ಐ ಅರವಿಂದ್ ಮತ್ತು ಮಠದ ಧರ್ಮದರ್ಶಿ ಕೆ.ಬಿ. ಮಂಜುನಾಥ್, ಸಮಾಜದ ಮುಖಂಡರಾದ ತಿಮ್ಮೇನಹಳ್ಳಿ ಚಂದ್ರಪ್ಪ, ಜಿಗಳಿ ಆನಂದಪ್ಪ, ಕೊಕ್ಕನೂರು ಸೋಮಶೇಖರ್, ಪಾಳೇಗಾರ್ ನಾಗರಾಜ್, ಮಕರಿ ಪಾಲಾಕ್ಷಪ್ಪ, ರಾಜನಹಳ್ಳಿ ಭೀಮಣ್ಣ ಮತ್ತಿತರರು ಈ ವೇಳೆ ಹಾಜರಿದ್ದರು.

# ಹರಪನಹಳ್ಳಿ: ಸಮರ್ಪಕ ವಿದ್ಯುತ್‌ಗಾಗಿ ರೈತರ ಪ್ರತಿಭಟನೆ



ಹರಪನಹಳ್ಳಿ, ಫೆ.6- ತಾಲ್ಲೂಕಿನ ಹೊಸಕೋಟೆ ಭಾಗದಲ್ಲಿ ವಿದ್ಯುತ್ ವೋಲ್ಟೇಜ್ ಕಡಿಮೆ ಇರುವ ಕಾರಣ ಎರಡು ವರ್ಷಗಳಿಂದ ಇಲ್ಲಿನ ರೈತರು ನಷ್ಟ ಹಾಗೂ ತೊಂದರೆ ಅನುಭವಿಸುತ್ತಿದ್ದಾರೆ. ಆದ್ದರಿಂದ ಈ ಭಾಗದ ಪಂಪ್ ಸೆಟ್ ಗಳಿಗೆ ಎರಡು ಹಂತಗಳಲ್ಲಿ ವಿದ್ಯುತ್ ಪ್ರಸರಣ ಮಾಡಬೇಕು ಎಂದು ಒತ್ತಾಯಿಸಿ ರೈತರು ದಿಢೀರ್ ಪ್ರತಿಭಟನೆ ನಡೆಸಿದರು

ರೈತ ಮುಖಂಡ ಎಸ್. ಜಾತಪ್ಪ ಮಾತನಾಡಿ ಈ ವರ್ಷ ಬರಗಾಲ ಬಂದಿರುವುದರಿಂದ ಈ ಭಾಗದ ಹಳ್ಳಿಗಳಲ್ಲಿ ರೈತರ ಪಂಪ್ ಸೆಟ್ ಗಳಿಗೆ ಒಂದೇ ಹಂತದಲ್ಲಿ ವಿದ್ಯುತ್ ನೀಡುತ್ತಿರುವುದು ಮತ್ತು ವೋಲ್ಟೇಜ್ ಕಡಿಮೆ ಇರುವುದರಿಂದ ರೈತರಿಗೆ, ದನಕರುಗಳಿಗೆ ನೀರು ಹಾಗೂ ಮೇವಿನ ಕೊರತೆಯಾಗಿದೆ. ಎರಡು ವರ್ಷಗಳಿಂದ ಅರಸಿಕೆರೆಯಲ್ಲಿ ಹೊಸ ವಿದ್ಯುತ್ ಪ್ರಸರಣ ಘಟಕ ಪ್ರಾರಂಭವಾಗುತ್ತದೆ ಎಂದು ಅಧಿಕಾರಿಗಳು ಹುಸಿ ಭರವಸೆ ಹೇಳಿಕೊಂಡು ಬರುತ್ತಿದ್ದಾರೆ.

ಚುನಾಯಿತ ಪ್ರತಿನಿಧಿಗಳು ನಮ್ಮ ಸಮಸ್ಯೆಯ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ, ಎಷ್ಟೋ ಬಾರಿ ಅಧಿಕಾರಿಗಳಿಗೆ ಮನವಿ ಹಾಗೂ ಪ್ರತಿಭಟನೆ ಮಾಡಿದರೂ ಸಹ ಹೊಸ ವಿದ್ಯುತ್ ಪ್ರಸರಣ ಘಟಕ ಪ್ರಾರಂಭವಾಗಿಲ್ಲ.

ಈ ನಿಟ್ಟಿನಲ್ಲಿ ರೈತರ ಬೆನ್ನೆಲುಬು ಮುರಿದಂತಾಗಿದೆ, ಕೂಡಲೇ ಈ ಸಮಸ್ಯೆ ಬಗೆಹರಿಯದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಲಾಗುವುದು ಎಂದು ಹೇಳಿದರು.

ಪುಣಭಘಟ್ಟ ವಿದ್ಯುತ್ ಪ್ರಸರಣ ಘಟಕದ ವ್ಯವಸ್ಥಾಪಕರಾದ ಅಂಜಲಿ ಯವರಿಗೆ ಹಾಗೂ ತಾಲ್ಲೂಕು ವಿದ್ಯುತ್ ಪ್ರಸರಣ ಕೇಂದ್ರಕ್ಕೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಎಸ್. ಜಾತಪ್ಪ, ಆನಂದಪ್ಪ, ಹೆಚ್. ಹನುಮಂತಪ್ಪ, ಗುರುಮೂರ್ತಿ, ಹೆಚ್. ಭರಮನಗೌಡ, ಹೆಚ್. ಎಸ್. ಮಹಾಂತೇಶಪ್ಪ, ಪೂಜಾರ್ ಸುರೇಶ್, ಹೆಚ್. ಕರಿಬಸಪ್ಪ, ಶಂಕರಪ್ಪ, ಶಿವಕುಮಾರ್, ನಾಗರಾಜ್, ಶಾಂತಕುಮಾರ್, ಹಾಲೇಶ್ ಮುಂತಾದ ರೈತ ಮುಖಂಡರು ಹಾಜರಿದ್ದರು.

## ಇಂದು ಶಿವ ಎಜುಕೇಷನಲ್ ಸಂಸ್ಥೆ ಶಾಲಾ ವಾರ್ಷಿಕೋತ್ಸವ

ದಾವಣಗೆರೆ, ಫೆ. 6- ಶಿವ ಎಜುಕೇಷನಲ್ ಅಸೋಸಿಯೇಷನ್ ಅಡಿಯಲ್ಲಿ ನಡೆಯುತ್ತಿರುವ 'ಸೋಫ್ರಸೈನ್ ಕಾನ್ಸೆಪ್ಟ್ ಸ್ಕೂಲ್' ವಾರ್ಷಿಕೋತ್ಸವವನ್ನು ನಾಳೆ ದಿನಾಂಕ 7 ರಂದು ಸಂಜೆ 6 ಗಂಟೆಗೆ ತಾಲ್ಲೂಕಿನ ಆರನೇ ಮೈಲಿಕಲ್ಲು (ತರಳಬಾಳು ನಗರ) ಇಲ್ಲಿ ಶಾಲಾ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆ ಕಾರ್ಯದರ್ಶಿ ಎಲ್. ಜಗದೀಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಾಣೇಹಳ್ಳಿ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸುವರು. ಶಾಲೆಯ ಆಡಳಿತಾಧಿಕಾರಿ ಟಿ.ಎನ್. ಶಿವಯೋಗಿ, ಪ್ರಾಚಾರ್ಯ ಹೆಚ್.ಎಸ್. ಭರತ್ ಮತ್ತಿತರರು ಭಾಗವಹಿಸಲಿದ್ದಾರೆ.

ಕಾರ್ಯದರ್ಶಿ ಎಲ್. ಜಗದೀಶ್ ಅಧ್ಯಕ್ಷತೆ ವಹಿಸಲಿದ್ದಾರೆಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸಂತೋಷ್, ಸುಧಾಕರ್, ಮೊಹಮ್ಮದ್ ಅತೀಕ್ ಉಪಸ್ಥಿತರಿದ್ದರು.

# ಗ್ರಾಮ ಪಂಚಾಯ್ತಿ ಸದಸ್ಯರುಗಳ ಮಹಾ ಒಕ್ಕೂಟದಿಂದ ಬೆಂಗಳೂರಿನಲ್ಲಿ ನಾಳೆ ಧರಣಿ

ದಾವಣಗೆರೆ, ಫೆ. 6- ವಿವಿಧ ಬೇಡಿಕೆಗಳನ್ನು ಈಡರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ಸದಸ್ಯರುಗಳ ಮಹಾ ಒಕ್ಕೂಟದ ವತಿಯಿಂದ ನಾಡಿದ್ದು ದಿನಾಂಕ 8 ರಂದು ಬೆಳಿಗ್ಗೆ 10.30 ಕ್ಕೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದು ಮಹಾ ಒಕ್ಕೂಟದ ಜಿಲ್ಲಾಧ್ಯಕ್ಷ ದೊಗ್ಗಳ್ಳಿ ವೀರೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದಾವಣಗೆರೆ ಜಿಲ್ಲೆಯಿಂದ 1500 ಗ್ರಾಮ ಪಂಚಾಯತ್ ಸದಸ್ಯರು ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಬೆಂಗಳೂರಿಗೆ ತೆರಳಲಿದ್ದಾರೆ. ಭಾರತದ ಸಂವಿಧಾನದಲ್ಲಿ ಗ್ರಾಮ ಪಂಚಾಯತ್‌ಗಳು ಸ್ವಯಂ ಆಡಳಿತ ಘಟಕಗಳಾಗಿ, ಅವುಗಳು ಕೆಲಸ ಮಾಡುವುದಕ್ಕೆ ಅವಶ್ಯಕವಾಗಬಹುದಾದ ಅಧಿಕಾರಗಳನ್ನು ಮತ್ತು ಪ್ರಾಧಿಕಾರಗಳನ್ನು ಅವುಗಳಿಗೆ ಕೊಡತಕ್ಕದ್ದು ಎಂದು ಹೇಳಲಾಗಿದೆ. ಆದರೆ ಸರ್ಕಾರಗಳು ಅದರಂತೆ ನಡೆದುಕೊಳ್ಳುತ್ತಿಲ್ಲ ಎಂದು ದೂರಿದರು.

1992 ರಲ್ಲಿ ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳ ಮೂಲಕ ಪಂಚಾಯತ್ ರಾಜ್ ಸಂಸ್ಥೆಗಳನ್ನು ಸಂವಿಧಾನಬದ್ಧಗೊಳಿಸುವ ತನಕ ದೇಶದ ಬಹುತೇಕ ರಾಜ್ಯಗಳಲ್ಲಿ ಗ್ರಾಮ ಪಂಚಾಯತಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿರಲಿಲ್ಲ. ತಿದ್ದುಪಡಿಯಾದ ಮೇಲೆ ದೇಶಾದ್ಯಂತ ಎಲ್ಲಾ ರಾಜ್ಯಗಳಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿದೆ. 40 ಮತ್ತು 243 ಜಿ ರ ಅನ್ವಯ ಗ್ರಾಮ ಪಂಚಾಯತಿಗಳು ಸ್ವಯಂ ಸರ್ಕಾರಗಳಾಗಿ ಕಾರ್ಯ ನಿರ್ವಹಿಸಬೇಕು ಎಂದು ಹೇಳಿದರೂ ಸಹ, ಅದು ಕಾರ್ಯರೂಪಕ್ಕೆ ಬಂದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜವಾಬ್ದಾರಿ ನಕ್ಷೆ, ಗ್ರಾಮಸಭೆ, ಬಾಪೂಜಿ ಸೇವಾ ಕೇಂದ್ರ, ಅಧಿಕಾರ ವಿಕೇಂದ್ರೀಕರಣ ಕಾಯ್ದೆ, ಕಚೇರಿ ನಿರ್ವಹಣಾ ಕೈಪಿಡಿ, ಸ್ಥಾಯಿ ಸಮಿತಿಗಳು ಸಕ್ರಿಯವಾಗಿ ಕಾರ್ಯನಿರ್ವಹಿಸಲು ನಿಯಮ ರೂಪಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಧರಣಿ ನಡೆಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವೀರೇಶ್, ಚೇತನ್, ಮೌಲಾನಾಯ್ಕ ಉಪಸ್ಥಿತರಿದ್ದರು.

## ಆರ್.ಜೆ. ಗಣೇಶ್ ವಿಶ್ವಕರ್ಮಗೆ ಎರಡು ಚಿನ್ನದ ಪದ



ದಾವಣಗೆರೆ,ಫೆ.6- ಕರಾಟೆ ಸಂಸ್ಥೆಯ ವತಿಯಿಂದ ಏರ್ಪಡಿಸಲಾಗಿದ್ದ ಅಂತರರಾಷ್ಟ್ರೀಯ ಮಟ್ಟದ ಕರಾಟೆ ಚಾಂಪಿಯನ್ ಶಿಪ್ ಸ್ಪರ್ಧೆಯಲ್ಲಿ ನಗರದ ಚೌಕಿಪೇಟೆಯಲ್ಲಿರುವ ಕರಾಟೆ ಶಾಲೆಯ ವಿದ್ಯಾರ್ಥಿ ಆರ್.ಜೆ. ಗಣೇಶ್ ವಿಶ್ವಕರ್ಮ ಅವರು ಶರಣಗೌಡ ಆರ್. ಬಿರಾದಾರ್ ಮಾರ್ಗದರ್ಶನದಲ್ಲಿ ಎರಡು ಚಿನ್ನದ ಪದಕ ಗಳಿಸಿದ್ದಾರೆ.

# ರಾಣೇಬೆನ್ನೂರು ವರ್ತಕರ ಧರಣಿ ಶಾಸಕ ಪ್ರಕಾಶ್ ಪ್ರಯತ್ನ ವಿಫಲ

ರಾಣೇಬೆನ್ನೂರು, ಫೆ.6- ಕಳೆದ ಒಂದು ವಾರದಿಂದ ವ್ಯಾಪಾರ ವಹಿವಾಟು ಬಂದ್ ಮಾಡಿ ಎಪಿಎಂಸಿ ಕಛೇರಿ ಎದುರು ಧರಣಿ ನಡೆಸುತ್ತಿರುವ ಇಲ್ಲಿನ ವರ್ತಕರು ಮತ್ತು ಎಪಿಎಂಸಿ ಅಧಿಕಾರಿಗಳ ಜೊತೆ ಚರ್ಚಿಸಿ ಸಮಸ್ಯೆಗೆ ಪರಿಹಾರ ದೊರಕಿಸಲು ಶಾಸಕ ಪ್ರಕಾಶ ಕೋಳಿವಾಡ ನಡೆಸಿದ ಪ್ರಯತ್ನ ವಿಫಲಗೊಂಡಿದೆ.

ಹೂಲಿಹಳ್ಳಿ, ಕೂನಬೇವು ಮೆಗಾ ಮಾರುಕಟ್ಟೆಯಲ್ಲಿ ವರ್ತಕರಿಗೆ ನಿವೇಶನ ವಿತರಣೆಯಲ್ಲಿ ವಿಧಿಸಿರುವ ಷರತ್ತುಗಳಿಂದ ವರ್ತಕರಿಗೆ ಬಹಳಷ್ಟು ಅನ್ಯಾಯವಾಗಲಿದೆ ಎಂದು, ಜಮೀನು ಮಾಲೀಕರಿಗೆ ಪರಿಹಾರ ಕೊಡುವ, ಹೊರಗಿನ ವರ್ತಕರಿಗೆ ನಿವೇಶನ ಮೀಸಲಿಡುವ ಹಾಗೂ ದರ ನಿಗದಿಪಡಿಸಿರುವ ಷರತ್ತುಗಳನ್ನ ಹಿಂಪಡೆಯಬೇಕು ಎನ್ನುವುದು ವರ್ತಕರ ಬಲವಾದ ಬೇಡಿಕೆ ಇದೆ.

ಈ ಷರತ್ತುಗಳನ್ನು ವಿರೋಧಿಸಿ ಕಳೆದ ನಾಲ್ಕಾರು ವರ್ಷ ಗಳಿಂದ ವರ್ತಕರು ಸುಮಾರು 50ಕ್ಕೂ ಹೆಚ್ಚು ಮನವಿಗಳನ್ನು ಸ್ಥಳೀಯ ಹಾಗೂ ಹಿರಿಯ ಅಧಿಕಾರಿಗಳಿಗೆ ಸಲ್ಲಿಸಿದ್ದರೂ ಸಹ ಅವುಗಳನ್ನು ಗಣನೆಗೆ ತೆಗೆದುಕೊಳ್ಳದೆ ಹಾಗೂ ವರ್ತಕರೊಂದಿಗೆ ಚರ್ಚಿಸದೆ ಅಧಿಕಾರಿಗಳು ನಿರ್ಣಯ ಕೈಗೊಂಡಿರುವ ಬಗ್ಗೆ ಬಲವಾದ ಆರೋಪ ವರ್ತಕರಿಂದ ಕೇಳಿಬರುತ್ತಿದೆ.

## ಪಿಎಂ - ಕಿಸಾನ್ ನಿಧಿ ಹೆಚ್ಚಳವಿಲ್ಲ

**(1ನೇ ಪುಟದಿಂದ)** ಬರುವ ಮಹಿಳಾ ರೈತರಿಗೂ ನೆರವು ಹೆಚ್ಚಿಸುವ ಪ್ರಸ್ತಾವನೆ ಇಲ್ಲ ಎಂದು ಕೇಂದ್ರ ಕೃಷಿ ಸಚಿವ ಅರ್ಜುನ್ ಮುಂಡ ಲೋಕಸಭೆಗೆ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಈ ಯೋಜನೆಯ ಮೂಲಕ 11 ಕೋಟಿ ರೈತರಿಗೆ 15 ಕಂತುಗಳಲ್ಲಿ 2.81 ಲಕ್ಷ ಕೋಟಿ ರೂ.ಗಳನ್ನು ವಿತರಿಸಲಾಗಿದೆ ಎಂದು ಸಚಿವರು ತಿಳಿಸಿದರು.

# ನಾಳೆ ಹೊನ್ನಾಳಿ - ನ್ಯಾಮತಿ ಪಂಚಾಯಿತಿ ಒಕ್ಕೂಟ ಸದಸ್ಯರ ಬೆಂಗಳೂರು ಚಲೋ

ನ್ಯಾಮತಿ, ಫೆ.6- ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕು ಗ್ರಾಮ ಪಂಚಾಯತಿ ಸದಸ್ಯರ ಒಕ್ಕೂಟದ ಪದಾಧಿಕಾರಿಗಳು ತಮ್ಮ ಬೇಡಿಕೆ ಈಡೇರಿಕೆಗಾಗಿ ಒತ್ತಾಯಿಸಿ, ಮಂಗಳವಾರ ತಹಶೀಲ್ದಾರ್ ಪಟ್ಟರಾಜ ಗೌಡರಿಗೆ ಮನವಿ ಅರ್ಪಿಸಿದರು.

ಒಕ್ಕೂಟದ ರಾಜ್ಯ ಸಹ ಕಾರ್ಯದರ್ಶಿ ರೇಖಾ ಆರ್. ಲೋಕೇಶ್ ಮಾತನಾಡಿ, ನಾಳೆ ದಿನಾಂಕ 8ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಬೆಂಗಳೂರು ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟದ ಕಾರ್ಯಾಧ್ಯಕ್ಷ ಕಾಡಶೆಟ್ಟಿಹಳ್ಳಿ ಸತೀಶ್ ನೇತೃತ್ವದಲ್ಲಿ ಗ್ರಾಮ ಪಂಚಾಯತಿ ಸದಸ್ಯರ ಒಕ್ಕೂಟದ ಪದಾಧಿಕಾರಿಗಳ ಜವಾಬ್ದಾರಿ ನಕ್ಷೆ, ಗ್ರಾಮ ಸಭೆಗಳಿಗೆ ನಿಯಮಗಳ ರಚನೆ, ಬಾಪೂಜಿ ಸೇವಾ ಕೇಂದ್ರಕ್ಕೆ ಬಲವರ್ಧನೆ, ಅಧಿಕಾರ ವಿಕೇಂದ್ರೀಕರಣ ಕಾಯ್ದೆ ರಚನೆ ಕಚೇರಿ ನಿರ್ವಹಣಾ ಕೈಪಿಡಿ ರಚನೆ ಈ ಸ್ವತ್ತು ದಾಖಲೆ ಸೃಜನೆ ಮಾಡಿ ಹಂಚುವುದು, ಕೇರಳ ಮಾದರಿಯ ಗೌರವ ಧನ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನದಲ್ಲಿರುವ ತೊಡಕುಗಳ ನಿವಾರಣೆ ಸೇರಿದಂತೆ 28 ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟು, ಬೇಡಿಕೆ ಈಡೇರಿಕೆಗಾಗಿ ಒತ್ತಾಯಿಸಿ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದರು.

ಈ ಸಂದರ್ಭದಲ್ಲಿ ಒಕ್ಕೂಟದ ಸದಸ್ಯರು ಹಾಗೂ ಗ್ರಾಮ ಪಂಚಾಯತಿ ಒಕ್ಕೂಟದ ಅಧ್ಯಕ್ಷರಾದ ಶ್ವೇತ ಬಸವರಾಜ್ ಬೆಳಗುತ್ತಿ, ಉಪಾಧ್ಯಕ್ಷ ನಾಗರಾಜ್, ಸುರವೊನ್ನೇ ಪಂಚಾಯಿತಿ ಅಧ್ಯಕ್ಷ ಯೋಗೇಶ್, ಮಲ್ಲಮ್ಮ ಚಿನ್ನಿಕಟ್ಟೆ, ಲಕ್ಷ್ಮಿ ಮಂಜುನಾಥ್, ರೇವತಿ ಪರಮೇಶ್ವರಪ್ಪ, ಚಟ್ನಹಳ್ಳಿ ಗೀತಾ ರಂಗಪ್ಪ, ವೀರೇಶ್ ಯರಗನಾಳ, ಅಧ್ಯಕ್ಷರಾದ ಸವಿತಾ ಹನುಮಂತಪ್ಪ, ಕುಂಕೋವ ಶ್ರುತಿ ರುದ್ರೇಶ್ ಇನ್ನಿತರರು ಇದ್ದರು.

# ಮಲತಾಯಿ ಧೋರಣೆ ಇಲ್ಲ : ಕೇಂದ್ರ ಸರ್ಕಾರ

**(1ನೇ ಪುಟದಿಂದ)** ತಿಳಿಸಿದರು. ಈಗಿನ ಸರ್ಕಾರದಲ್ಲಿ ರಾಜ್ಯಗಳಿಂದ ಬೇಡಿಕೆ ಬರುವ ಮೊದಲೇ ಅಂತರ ಸಚಿವಾಲಯ ಕೇಂದ್ರ ತಂಡವನ್ನು ರಾಜ್ಯಗಳಿಗೆ ಕಳಿಸಲಾಗುತ್ತಿದೆ ಎಂದೂ ಸಚಿವರು ಹೇಳಿದ್ದಾರೆ.

2010-15ರ ಅವಧಿಯಲ್ಲಿ 33,581 ಕೋಟಿ ರೂ.ಗಳನ್ನು ರಾಜ್ಯ ವಿಕೋಪ ನಿಧಿಗೆ ನೀಡಲಾಗಿತ್ತು. 2015-2020ರಲ್ಲಿ ಈ ಮೊತ್ತ 61,220 ಕೋಟಿ ರೂ.ಗಳಿಗೆ ತಲುಪಿತ್ತು. 2021-26ರಲ್ಲಿ ಈ ಮೊತ್ತ 1,38,122 ಕೋಟಿ ರೂ.ಗಳಿಗೆ ತಲುಪಿದೆ ಎಂದೂ ಅವರು ತಿಳಿಸಿದರು.


**ಬಾಡಿಗೆಗೆ / ಲೀಸ್‌ಗೆ**
3BHK, 1ನೇ ಮಹಡಿ, ಕಛೇರಿಗೆ ಲಭ್ಯವಿದೆ. ಸಸ್ಯಹಾರಿಗಳಿಗೆ ಮಾತ್ರ. ಸ್ವಂತ ಬೋರ್‌ವೆಲ್ ವ್ಯವಸ್ಥೆ ಇದೆ. ಸಿ.ವಿ. ಶಿವಕುಮಾರ, ಬಳ್ಳಾರಿ ಸಿದ್ದಮ್ಮ ಪಾರ್ಕ್, ಕೆ.ಬಿ. ಬಡಾವಣೆ, ದಾವಣಗೆರೆ-2.
81478 74601

**ಬೇಕಾಗಿದ್ದಾರೆ**
ಮಂಡಿಪೇಟೆಯಲ್ಲಿ ಇರುವ ಸ್ಟೀಲ್ ಫರ್ನೀಚರ್ ಅಂಗಡಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
99017 16310

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಹೌಸಿಂಗ್ ಬೋರ್ಡ್ (80 ಲಕ್ಷ) 12x18 (40x60) ಉತ್ತರ 120 ಅಡಿ ರಸ್ತೆಗೆ (ಕಮರ್ಷಿಯಲ್)
ಕಿರಣ್ ಭೂಸ್ನೂರ್
98440 63409
(FOR IMMEDIATELY REGISTER ONLY)
ಡಾಕ್ಟರ್‌ಗಳಿಗೆ ತುಂಬಾ ಚೆನ್ನಾಗಿ ಇದೆ.

**ಸೈಟ್ ಮಾರಾಟಕ್ಕೆ (KHB)**
ಹೌಸಿಂಗ್ ಬೋರ್ಡ್ 6X9 (20X30) ಪೂರ್ವ 16 ಲಕ್ಷ 12x18 ಮೀಟರ್ (40x60) ಪಶ್ಚಿಮ 67 ಲಕ್ಷ
ಕಿರಣ್ ಭೂಸ್ನೂರ್
97315 6340, 98440 63409
ರಿಜಿಸ್ಟರ್ ಖರ್ಚು + ಕಮೀಷನ್ ಸೇರಿ ನೇರವಾಗಿ ರಿಜಿಸ್ಟರ್ ಪಾರ್ಟಿಯಿಂದ ವ್ಯಾಪಾರ

**ಬೇಕಾಗಿದ್ದಾರೆ**
ಕ್ಲಿನಿಕ್‌ನಲ್ಲಿ ಕೆಲಸ ನಿರ್ವಹಿಸಲು ಮಹಿಳಾ ಸಿಬ್ಬಂದಿ ಬೇಕಾಗಿದ್ದಾರೆ.
ವಿಳಾಸ : **ಡಾ. ಎನ್. ಹೆಚ್. ಕೃಷ್ಣ,** ಜೈನ್ ಲ್ಯಾಬ್ ಕೆಳಗೆ, ಮೋತಿ ವೀರಪ್ಪ ಕಾಲೇಜು ಹಿಂಭಾಗ, ಪಿ.ಜೆ. ಬಡಾವಣೆ, ದಾವಣಗೆರೆ.

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2&3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಬೋರ್‌ವೆಲ್ ಪಾಯಿಂಟ್**
ಅಂತರ್ಜಲ ಸಂಶೋಧನೆ (Ground Water)
ಬೋರ್‌ವೆಲ್ ಪಾಯಿಂಟ್‌ಗಾಗಿ
ಸಂಪರ್ಕಿಸಿ
ಎಂ.ಟಿ. ಬಸವರಾಜು ಎಂ.ಎಸ್ಸಿ
ಭೂ ವಿಜ್ಞಾನಿಗಳು
94492 02888, 86608 03384

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ಇಂದು ದಿ.7.2.2024ರ ಬುಧವಾರ
ನಾಳೆ ದಿ.8.2.2024ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಬೇಕಾಗಿದ್ದಾರೆ**
ಮೆಸ್‌ನಲ್ಲಿ ಕೆಲಸ ಮಾಡಲು ಭಟ್ಟರು ಬೇಕಾಗಿದ್ದಾರೆ.
ಸಂಪರ್ಕಿಸಿ :
96321 64685

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಎಸ್.ಎಸ್. ಲೇಔಟ್, ಶಿವ-ಪಾರ್ವತಿ, ಗ್ಲಾಸ್ ಹೌಸ್ ಲೇಔಟ್, ಡಾಲರ್ಸ್ ಕಾಲೋನಿ, ಜೆ.ಹೆಚ್. ಪಟೇಲ್, ಶಂಕರ್ ವಿಹಾರ್ ಲೇಔಟ್ ಮತ್ತು ಕಮರ್ಷಿಯಲ್ ಸೈಟು, ಇನ್ವೆಸ್ಟ್ ಸೈಟು, ಮನೆಗಳು ಮತ್ತು ಹೊಲಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ.
97315 12365

**ಬೇಕಾಗಿದ್ದಾರೆ**
ಬಿ.ಕಾಂ., ವಿದ್ಯಾರ್ಹತೆ ಹೊಂದಿರುವ ಮತ್ತು ಅಕೌಂಟೆಂಟ್‌ನಲ್ಲಿ ನುರಿತ ಅನುಭವವಿರುವ ಮಹಿಳಾ ಅಭ್ಯರ್ಥಿಗಳು ಕೆಲಸಕ್ಕೆ ಬೇಕಾಗಿದ್ದಾರೆ.
91486 86827

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸ್‌ಗಳು ಬೇಕಾಗಿದ್ದಾರೆ. ನುರಿತ ಅನುಭವವುಳ್ಳ A.N.M ಮತ್ತು G.N.M. ಆದವರು ಈ ಕೆಳಗಿನ ಮೊಬೈಲ್ ನಂಬರ್ ಗೆ ತಮ್ಮ ಬಯೋಡೇಟಾದೊಂದಿಗೆ ಸಂಪರ್ಕಿಸಿ.
98450 35710

**ಬೇಕಾಗಿದ್ದಾರೆ**
ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ, ಶಾಲೆಗೆ ವಾಚ್‌ಮ್ಯಾನ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
98868 40642
63612 24507

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

ನೇರ ಪರೀಕ್ಷೆ ಕಟ್ಟಲು/ರೆಗ್ಯುಲರ್ ಪ್ರವೇಶಕ್ಕಾಗಿ
**SSLC ನೇರ ಪರೀಕ್ಷೆ**
IInd PUC/Senior Secondary, Arts/Commerce/Science B.Sc.-Agriculture, B.Tech All branches, D.Pharma, B.Ed., PhD regular B.A., B.com., B.Sc., M.A., M.Com., MBA, MLIB, Correspondence.
ಆಸಕ್ತರು ಫೋಟೋ-8, ಆಧಾರ್ ಕಾರ್ಡ್ ಹಾಗೂ ಮಾರ್ಕ್ಸ್ ಕಾರ್ಡ್‌ನೊಂದಿಗೆ ಸಂಪರ್ಕಿಸಿರಿ.
SS Global Institute for Higher Education
1982-1ನೇ ಮಹಡಿ, ಅನ್ವಯ ಆಯುರ್ವೇದಿಕ್ ಆಸ್ಪತ್ರೆ, ಶ್ರೀ ಸಾಯಿಬಾಬಾ ದೇವಸ್ಥಾನ ಹತ್ತಿರ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ-04.
72593 59861/99863 45266
ವಿ. ಸೂ: ಫೀಸನ್ನು ಕಂತಿನಲ್ಲಿ ಪಾವತಿಸಬಹುದು

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಮನೆ ಬಾಡಿಗೆಗೆ ಇದೆ**
2 BHK, 1ನೇ ಮಹಡಿ, 15ನೇ ಕ್ರಾಸ್, ಕೆಟಿಜೆ ನಗರ, ದಾವಣಗೆರೆ.
98444 99943

**ROOM FOR RENT**
Single attached Room with all facilites available with wardrobe and cots system at MCC "A" block, Near Ram Krishna Ashrama, Beside Ganesha Temple
97405 69252

**WANTED STENO**
Male Steno to Advocate Office
MALVI LAW ASSOCIATES
#3693, MCC `A' Block, DVG,
98451 90787, 98456 44100

**ಬೇಕಾಗಿದ್ದಾರೆ**
ದಾವಣಗೆರೆ ಶ್ರೀ ಸಾಯಿ ಏಜೆನ್ಸಿಯಲ್ಲಿ ಕೆಲಸ ಮಾಡಲು ಆಫೀಸ್ ವರ್ಕ್ ಮತ್ತು ಕಲೆಕ್ಷನ್ ಬಾಯ್ ಕೆಲಸ ಖಾಲಿ ಇದೆ.
ಸಂಪರ್ಕಿಸಿ :
78294 13359

**ಸುಸಜ್ಜಿತವಾದ ಕ್ಲಿನಿಕ್ ಬಾಡಿಗೆಗಿದೆ**
ಸ್ವಾಗೇರ್‌ಪೇಟೆ ಕಾಯಿಪೇಟೆ, ಬಸವೇಶ್ವರ ದೇವಸ್ಥಾನ, ಹಳೆ ದಾವಣಗೆರೆ ಹತ್ತಿರ, 2 ಕೊಠಡಿ (ಕ್ಯಾಬಿನ್) ವುಳ್ಳ ಮಳಿಗೆ ಕ್ಲಿನಿಕ್/ಆಫೀಸ್ ಕೊಡುವುದಿದೆ ಅಥವಾ ಕ್ಲಿನಿಕ್‌ನ ಎಲ್ಲಾ ಸಾಮಗ್ರಿಗಳು ಮಾರಾಟಕ್ಕಿವೆ.
98867 06400

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
ಕಿರಾಣಿ ಅಂಗಡಿ ಕೆಲಸಕ್ಕೆ ಅನುಭವ ಉಳ್ಳವರು ಬೇಕಾಗಿದ್ದಾರೆ.
ಶ್ರೀ ಗುರು ಕೊಟ್ಟೂರೇಶ್ವರ ಪ್ರಾವಿಜನ್ ಸ್ಟೋರ್
ಐ.ಟಿ.ಐ ಕಾಲೇಜು, # 617/6, 60 ಅಡಿ ರೋಡ್ ನಿಟ್ಟುವಳ್ಳಿ, ದಾವಣಗೆರೆ-577005.
95919 21004,73381 00402

**WANTED**
Banking Sector Job Openings (Female Only)
Qualification : Any Degree.
90715 55081
Interview Time - 11AM

**24X7 CAR TAXI**
ಕಾರ್ ಬಾಡಿಗೆಗೆ.
ಸಂಪರ್ಕಿಸಿ :
86609 98651
97436 54365

**LADY TEACHERS WANTED**
Any Degree - 3 Posts
PUC - 3 Posts
NTC - 3 Posts
(for Nursery School)
99647 51130

**ಬೋರ್ ಪಾಯಿಂಟ್**
ವೈಜ್ಞಾನಿಕ ವಿಧಾನದಿಂದ ಬೋರ್ ಪಾಯಿಂಟ್ ಮಾಡಿಕೊಡಲಾಗುವುದು.
ಸಂಪರ್ಕಿಸಿ :
86609 98651, 97436 54365

**ಸಂಜೀವಿನಿ ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರನ್ನು ನೋಡಿಕೊಳ್ಳಲು ಹೋಮ್ ನರ್ಸ್ (ಕೇರ್‌ಟೇಕರ್ಸ್) ಬೇಕಾಗಿದ್ದಲ್ಲಿ ಸಂಪರ್ಕಿಸಿ ಹಾಗೂ ವಯೋವೃದ್ದರನ್ನು ನೋಡಿಕೊಳ್ಳಲು ಮಹಿಳೆಯರು ಮತ್ತು ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ 5th, 7th, 10th, PUC, GNM, ANM, ಉಚಿತ ಊಟ, ವಸತಿಯೊಂದಿಗೆ 15,000 ರಿಂದ 25,000 ರೂ.
ಫೋ. : 91486 83185

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ


## ಪ್ರಕಾಶ್‌ರಾವ್ ಗುಜ್ಜರ್ ನಿಧನ



ದಾವಣಗೆರೆ ತರಳಬಾಳು ಬಡಾವಣೆ, 13ನೇ ಕ್ರಾಸ್ ವಾಸಿ ಜಿ.ಆರ್. ಪ್ರಕಾಶ್ ರಾವ್ (63) ಇವರು ದಿನಾಂಕ 06.02.2024ರ ಮಂಗಳವಾರ ರಾತ್ರಿ 9 ಕ್ಕೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಸೊಸೆ, ಮೊಮ್ಮಗಳು, ಸಹೋದರರು, ಸಹೋದರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 7.02.2024ರ ಬುಧವಾರ ಮಧ್ಯಾಹ್ನ 3ಕ್ಕೆ ನಗರದ ಪಿ.ಬಿ. ರಸ್ತೆಯಲಿರುವ ವೈಕುಂಠಧಾಮದಲ್ಲಿ ನೆರವೇರಲಿದೆ.

## ಗಂಗನಕಟ್ಟೆ ಓಬೇನಹಳ್ಳೇರ ಶಿವಾನಂದಪ್ಪ ನಿಧನ



ದಾವಣಗೆರೆ ತಾಲ್ಲೂಕು ಗಂಗನಕಟ್ಟೆ ಗ್ರಾಮದ ವಾಸಿ ಓಬೇನಹಳ್ಳೇರ ಶಿವಾನಂದಪ್ಪ (65) ಇವರು ದಿನಾಂಕ 06.02.2024ರ ಮಂಗಳವಾರ ಸಂಜೆ 7.30 ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಮತ್ತು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 07.02.2024ರ ಬುಧವಾರ ಮಧ್ಯಾಹ್ನ 12 ಕ್ಕೆ ದಾವಣಗೆರೆ ತಾಲ್ಲೂಕು ಗಂಗನಕಟ್ಟೆ ಗ್ರಾಮದಲ್ಲಿ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಜಿಲ್ಲಾ ಉತ್ತಮ ಶಿಕ್ಷಕಿ ಪ್ರಶಸ್ತಿ



ದಾವಣಗೆರೆ, ಫೆ. 6- ರಾಜ್ಯ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ಜಿಲ್ಲಾ ಘಟಕದಿಂದ ನಗರದ ಗುರು ಭವನದಲ್ಲಿ ಈಚೆಗೆ ಹಮ್ಮಿಕೊಂಡಿದ್ದ ಸಾವಿತ್ರಿಬಾಯಿ ಫುಲೆ ಹಾಗೂ ಫಾತಿಮಾ ಶೇಕ್ ಅವರ ಜಯಂತ್ಯೋತ್ಸವ, ಶೈಕ್ಷಣಿಕ ಕಾರ್ಯಾಗಾರ ಮತ್ತು ಜಿಲ್ಲಾ ಮಟ್ಟದ ಸಾವಿತ್ರಿಬಾಯಿ ಫುಲೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ನಗರದ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಎಲ್ಲಮ್ಮ ನಗರ ದಾವಣಗೆರೆ ದಕ್ಷಿಣ ವಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀಮತಿ ಎಸ್. ಮಂಜುಳಾ ಇವರಿಗೆ ಜಿಲ್ಲಾ ಉತ್ತಮ ಶಿಕ್ಷಕಿ ಪ್ರಶಸ್ತಿ ನೀಡಿ ಗೌರವಿಸಿ, ಸನ್ಮಾನಿಸಲಾಯಿತು.

ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಜಿ. ಕೊಟ್ರೇಶ್, ಡಯಟ್ ಪ್ರಾಚಾರ್ಯರಾದ ಎಸ್. ಗೀತಾ, ಕ್ಷೇತ್ರ ಶಿಕ್ಷಣಾಧಿಕಾರಿ ಡಾ. ಪುಷ್ಪಲತಾ, ಶೇರ್ ಅಲಿ, ಹನುಮಂತಪ್ಪ, ಡಿಡಿಪಿಐ ಶಿಕ್ಷಣಾಧಿಕಾರಿ ರಾಜಶೇಖರ್, ಸಂಘದ ಜಿಲ್ಲಾಧ್ಯಕ್ಷೆ ಕಲ್ಪನಾ ರವೀಂದ್ರನಾಥ್, ಪ್ರಧಾನ ಕಾರ್ಯದರ್ಶಿ ಹೆಚ್. ಮಂಗಳ, ಖಜಾಂಚಿ ಸಿ. ಪದ್ಮ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ವೀರೇಶ್ ಒಡೆನಪುರ, ಕಾರ್ಯದರ್ಶಿ ಗುರುಮೂರ್ತಿ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಮುಬಾರಕ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ರಾಮಣ್ಣ ಹಾಗು ಇತರರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಸಾವಿತ್ರಿಬಾಯಿ ಫುಲೆ ಹಾಗೂ ಜ್ಯೋತಿರಾವ್ ಫುಲೆ ಹೆಸರಿನಲ್ಲಿ ಜಿಲ್ಲೆಯ ಎಲ್ಲಾ ತಾಲೂಕಿನ 56 ಶಿಕ್ಷಕರಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು.

## ಪರೀಕ್ಷಾ ಅಕ್ರಮ ತಡೆ ವ್ಯಾಪ್ತಿಗೆ ವಿದ್ಯಾರ್ಥಿಗಳಿಲ್ಲ

ನವದೆಹಲಿ,ಫೆ.6- ಪರೀಕ್ಷಾ ಅಕ್ರಮಗಳನ್ನು ತಡೆಯಲು ರೂಪಿಸಲಾಗುತ್ತಿರುವ ಕಾನೂನಿನ ವ್ಯಾಪ್ತಿಗೆ ವಿದ್ಯಾರ್ಥಿಗಳು ಹಾಗೂ ಅಭ್ಯರ್ಥಿಗಳು ಬರುವುದಿಲ್ಲ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಲೋಕಸಭೆಗೆ ತಿಳಿಸಿದ್ದಾರೆ. ಪರೀಕ್ಷಾ ಅಕ್ರಮಗಳನ್ನು ತಡೆಯಲು ಕೇಂದ್ರ ಸರ್ಕಾರ ಸಾರ್ವಜನಿಕ ಪರೀಕ್ಷೆ ಅಕ್ರಮ ತಡೆ ಮಸೂದೆಯನ್ನು ಮಂಡಿಸಿದೆ. ಪರೀಕ್ಷಾ ಅವ್ಯವಹಾರಗಳಿಗೆ ಗರಿಷ್ಠ ಹತ್ತು ವರ್ಷಗಳ ಶಿಕ್ಷೆ ನೀಡಲು ಕಾಯ್ದೆಯಲ್ಲಿ ಅವಕಾಶವಿದೆ. ಈ ಬಗ್ಗೆ ನಡೆದ ಚರ್ಚೆಯಲ್ಲಿ ಮಾತನಾಡಿದ ಸಚಿವ ಸಿಂಗ್, ವಿದ್ಯಾರ್ಥಿಗಳು ಹಾಗೂ ಅಭ್ಯರ್ಥಿಗಳು ಈ ಕಾಯ್ದೆಯ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳಿದರು.

# ಸಾಣೇಹಳ್ಳಿ ಶ್ರೀಗಳಿಗೆ 'ಡಾ. ಕಲಬುರ್ಗಿ ಪ್ರಗತಿಪರ ಚಿಂತಕ' ಪ್ರಶಸ್ತಿ ಪ್ರದಾನ

ಸಾಣೇಹಳ್ಳಿ, ಫೆ.6- ಪ್ರಶಸ್ತಿಯ ಬಗ್ಗೆ ಆಸಕ್ತಿಯೂ ಇಲ್ಲ, ನಿರಾಸಕ್ತಿಯೂ ಇಲ್ಲ. ಪ್ರಶಸ್ತಿಯನ್ನು ಸ್ವೀಕಾರ ಮಾಡಿದರೂ ದೊಡ್ಡವರಾಗೋದಿಲ್ಲ. ತಿರಸ್ಕಾರ ಮಾಡಿದರೂ ದೊಡ್ಡವರಾಗೋದಿಲ್ಲ. ಅದನ್ನು ಗೌರವದಿಂದ ಸ್ವೀಕಾರ ಮಾಡುವ ಮನಸ್ಥಿತಿಯನ್ನು ಬೆಳೆಸಿಕೊಂಡು ತಮ್ಮ ಜವಾಬ್ದಾರಿಗಳನ್ನು ಹೆಚ್ಚಿಸಿಕೊಳ್ಳಬೇಕು. ಅದರಿಂದ ತನ್ನ ವ್ಯಕ್ತಿತ್ವ ಗಟ್ಟಿಗೊಳಿಸಿಕೊಳ್ಳಬೇಕು ಎಂದು ಪಂಡಿತಾರಾಧ್ಯ ಶ್ರೀಗಳು ಹೇಳಿದರು.

ಧಾರವಾಡದ ಮಜ್ಜಿಗೆ ಪಂಚಪ್ಪ ಸಮುದಾಯ ಸಭಾ ಭವನದಲ್ಲಿ ಬಸವ ಅಂತರರಾಷ್ಟ್ರೀಯ ಲಂಡನ್ ಪ್ರತಿಷ್ಠಾನದವರು ನೀಡುವ ಡಾ. ಎಂ.ಎಂ. ಕಲಬುರ್ಗಿ ಪ್ರಗತಿಪರ ಚಿಂತಕ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

ಪ್ರಶಸ್ತಿಕೊಡುವವರಿಗೂ, ಪಡೆದುಕೊಳ್ಳುವವರಿಗೂ ಅರ್ಹತೆಗಳಿರಬೇಕು. ಇತ್ತೀಚಿನ ದಿನಗಳಲ್ಲಿ ಪ್ರಶಸ್ತಿ ಪಡೆದುಕೊಳ್ಳುವುದಕ್ಕಾಗಿ ಒತ್ತಡಗಳು ಹೆಚ್ಚಿ ಹಣ ಕೊಟ್ಟು ಪಡೆದುಕೊಳ್ಳುವ ವಾತಾವರಣ ನಿರ್ಮಾಣವಾಗಿದೆ. ಪ್ರಶಸ್ತಿಗಳು ಕೆಲವರನ್ನು ಪುರಸ್ಕರಿಸಿದರೆ ಗೌರವ ಹೆಚ್ಚಿಸಿಕೊಳ್ಳುತ್ತೆ. ಇನ್ನು ಕೆಲವರನ್ನು ಪುರಸ್ಕರಿಸಿದರೆ ಅದರ ಮೌಲ್ಯ ಕಳೆದುಕೊಳ್ಳುತ್ತೆ. ಆದ್ದರಿಂದ ಪ್ರಶಸ್ತಿ ತನ್ನ ಗೌರವವನ್ನು ಹೆಚ್ಚಿಸಿಕೊಳ್ಳುವ ಯೋಗ್ಯ ವ್ಯಕ್ತಿಯನ್ನು ಆಯ್ಕೆ ಮಾಡಿದಾಗ ಮಾತ್ರ ಅದರ ಮೌಲ್ಯ ಹೆಚ್ಚುವುದು.

ನಮ್ಮ ದೀಕ್ಷಾ ಗುರುಗಳಾದ ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳವರು ಬಸವಣ್ಣನವರನ್ನು ಗೃಹಸ್ಥ ಜಗದ್ಗುರು ಎಂದು ಕರೆಯುತ್ತಿದ್ದರು. ಬಸವಣ್ಣನವರ ತತ್ವಗಳನ್ನು ಉಸಿರಾಗಿಸಿಕೊಂಡು ನಡೆ-ನುಡಿಗಳನ್ನು ಬದುಕಿನುದ್ದಕ್ಕೂ ಸಿದ್ಧಾಂತಗಳನ್ನಾಗಿ ಮಾಡಿಕೊಂಡರು.

ಇತ್ತೀಚಿನ ದಿನಗಳಲ್ಲಿ ಜನರಲ್ಲಿ ತತ್ವ ನಿಷ್ಠೆ ಕಡಿಮೆಯಾಗಿ ದುರ್ಮಾರ್ಗದ ಕಡೆ ವಾಲುತ್ತಿದ್ದಾರೆ ಎಂದರು.

ಗದಗಿನ ತೋಂಟದಾರ್ಯ ಮಠದ ಶ್ರೀ ಸಿದ್ಧರಾಮ ಮಹಾಸ್ವಾಮಿಗಳು ಮಾತನಾಡಿ, ಪಂಡಿತಾರಾಧ್ಯ ಶ್ರೀಗಳು ಪ್ರಗತಿಪರ ಚಿಂತನೆಗೆ ಹೆಸರಾದವರು. ಈ ಪ್ರಶಸ್ತಿ ಶ್ರೀಗಳಿಗೆ ಕೊಟ್ಟು, ಪ್ರಶಸ್ತಿಗೆ ನ್ಯಾಯವನ್ನು ಒದಗಿಸಿದ್ದಾರೆ.

ಎಂ.ಎಂ. ಕಲ್ಬುರ್ಗಿ ಪ್ರಗತಿಪರ ಚಿಂತಕ ಪ್ರಶಸ್ತಿ ಪಡೆದುಕೊಳ್ಳುವುದಕ್ಕೂ ಅರ್ಹತೆ ಇರಬೇಕು. ಅಂತಹ ಅರ್ಹತೆ ಪಂಡಿತಾರಾಧ್ಯ ಶ್ರೀಗಳಿಗೆ ಇದೆ. ಬಸವಾದಿ ಶಿವಶರಣರ ವೈಜ್ಞಾನಿಕ, ವೈಚಾರಿಕ ವಿಚಾರಗಳನ್ನು ಪ್ರತಿಬಿಂಬಿಸುವ ಕಾರ್ಯ ಪಂಡಿತಾರಾಧ್ಯ ಶ್ರೀಗಳಿಂದ ಆಗ್ತಾ ಇದೆ. ಕಲ್ಬುರ್ಗಿಯವರ ಯೋಜನೆ ಮತ್ತು ಯೋಚನೆಗಳನ್ನು ಅಕ್ಷರಶಃ ಕಾರ್ಯರೂಪಕ್ಕೆ ಪಂಡಿತಾರಾಧ್ಯ ಶ್ರೀಗಳು ತರುತ್ತಿರುವುದು ಶ್ಲಾಘನೀಯ ಎಂದರು



ನಾಡೋಜ ಗೊ.ರು. ಚನ್ನಬಸಪ್ಪ ಮಾತನಾಡಿ, ಪ್ರಶಸ್ತಿ ಎನ್ನುವುದು ಪ್ರತಿಷ್ಠೆ, ಗೌರವಕ್ಕೆ, ಅನನ್ಯತೆಗೆ, ಮನ್ನಣೆಗೆ ಸಂದ ಗೌರವ. ಪ್ರಶಸ್ತಿ ಮೂರು ಅಂಶಗಳನ್ನು ಒಳಗೊಂಡಿದೆ. ಪ್ರಶಸ್ತಿ ಪ್ರವರ್ತಕ, ಪ್ರಶಸ್ತಿ ಪ್ರಯುಕ್ತ, ಪ್ರಶಸ್ತಿ ಪುರಸ್ಕೃತರು. ಈ ಸಮಾರಂಭದಲ್ಲಿ ಮೂರೂ ಸಂಗಮಗೊಂಡಿವೆ. ಪ್ರಶಸ್ತಿ ಪುರಸ್ಕೃತರು ತಮ್ಮ ಮಠವನ್ನು ಶರಣ ತತ್ವ ಪ್ರಸಾರದ ವೈಚಾರಿಕ ಮಠವನ್ನಾಗಿ ಮಾಡಿದರು. ಬೆಂಕಿಗಿಂತ ಬೆಳಕು ದೊಡ್ಡದೆಂದು ನಂಬಿ ಆ ಬೆಳಕನ್ನೇ ಲೋಕಕ್ಕೆಲ್ಲ ಹಂಚಿದವರು ಎಂ.ಎಂ. ಕಲ್ಬುರ್ಗಿಯವರು. ಅವರ ಹೆಸರಿನಲ್ಲಿ ಕೊಡಮಾಡುವ ಪ್ರಶಸ್ತಿಯನ್ನು ಪಂಡಿತಾರಾಧ್ಯ ಶ್ರೀಗಳಿಗೆ ಕೊಟ್ಟಿರುವುದು ಪ್ರಶಸ್ತಿಗೇ ಘನತೆ, ಗೌರವ ಬಂದಿದೆ ಎಂದು ಶ್ಲಾಘಿಸಿದರು.

ಗಂಭೀರ ವೈಚಾರಿಕ ಚಿಂತಕರು ಪಂಡಿತಾರಾಧ್ಯ ಶ್ರೀಗಳು. ಭಕ್ತರು ನಡೆಸುವ ಅಡ್ಡ, ಉದ್ದ ಪಲ್ಲಕ್ಕಿಯ ಮೇಲೆ ಕೂರದೇ, ಸಮಾಜದಲ್ಲಿ ಜಾಗೃತಿಯನ್ನುಂಟು ಮಾಡುವರು. ಮಠಗಳು ಹೇಗಿದ್ದರೆ ಸಮಾಜಕ್ಕೆ ಬೇಕಾಗುತ್ತದೆ ಎನ್ನೋದನ್ನು ಪಂಡಿತಾರಾಧ್ಯ ಶ್ರೀಗಳು ತೋರಿಸಿಕೊಟ್ಟಿದ್ದಾರೆ. 2019ರಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದ ಮತ್ತೆ ಕಲ್ಯಾಣ ನಡೆದ ಕ್ರಾಂತಿ ಮುಂದೆ ಮತ್ತೆಂದೂ ನಡೆಯಲಿಕ್ಕೆ ಸಾಧ್ಯವಿಲ್ಲ. ಇದರ ಪ್ರೇರಣೆಯಿಂದಲೇ 'ಬಸವಣ್ಣ ಸಾಂಸ್ಕೃತಿಕ ನಾಯಕ' ಎಂದು ಕರ್ನಾಟಕ ಸರ್ಕಾರ ಘೋಷಣೆ ಮಾಡಿದ್ದು ಎಂದರು.

ಶರಣ ಚಿಂತಕ ವೀರಣ್ಣ ರಾಜೂರು ಮಾತನಾಡಿ, ಬಸವ ತತ್ವಕ್ಕೆ ಕುಂದುಬಂದಾಗ ಮೊದಲು ಪ್ರತಿಕ್ರಿಯಿಸುವಂಥವರು ಪಂಡಿತಾರಾಧ್ಯ ಶ್ರೀಗಳು. ಯಾರಿಗೂ ಅಂಜದ ರೀತಿಯಲ್ಲಿ ತಮ್ಮ ನಿಲುವುಗಳನ್ನು ವ್ಯಕ್ತಪಡಿಸುವರು. ಶರಣರ ವಿಚಾರಗಳನ್ನು, ರಂಗಭೂಮಿಯನ್ನು ಮಾಧ್ಯಮವನ್ನಾಗಿ ಮಾಡಿಕೊಂಡು ವಿಚಾರ ಪ್ರಸಾರ ಮಾಡುವರು ಎಂದರು.

ಪ್ರಾಸ್ತಾವಿಕವಾಗಿ ನಾಗರಾಜಮೂರ್ತಿ ಮಾತನಾಡಿ, ಇಡೀ ನಾಡಿನಲ್ಲಿ ವೈಚಾರಿಕ, ವೈಜ್ಞಾನಿಕ ಪ್ರಜ್ಞೆಯನ್ನು ಗುರುತಿಸಿ ಕೊಡುವ ಎಂ.ಎಂ. ಕಲ್ಬುರ್ಗಿ ಪ್ರಗತಿಪರ ಚಿಂತಕ ಪ್ರಶಸ್ತಿ ಶರಣರ ವಿಚಾರಗಳಲ್ಲಿ ಹೆಚ್ಚು ದುಡಿಯುವಂಥವರಿಗೆ ಕೊಡಮಾಡುವ ಪ್ರಶಸ್ತಿ. ನಾವು ಎಲ್ಲ ಕ್ಷೇತ್ರಗಳಲ್ಲಿ ಬೆಳೆದರೂ ಮಾನವೀಯ ಮೌಲ್ಯಗಳ ಕುಸಿತ ಇದೆ. ಮಾನವೀಯತೆಯನ್ನು ಪುನರ್ ಸ್ಥಾಪಿಸಬೇಕು. ಕಲ್ಬುರ್ಗಿಯವರನ್ನು ಕೊಂದ ಹಾಗೆ ಇವತ್ತು ಬಸವ ತತ್ವಗಳನ್ನು ಕೊಲ್ಲುತ್ತಿದ್ದಾರೆ. ಆದ್ದರಿಂದ ನಾವೆಲ್ಲರು ಎಚ್ಚರ ವಹಿಸಬೇಕಾಗಿದೆ ಎಂದರು.

ಎಸ್. ಮಹಾದೇವಯ್ಯ ಅಧ್ಯಕ್ಷೀಯ ನುಡಿಗಳನ್ನಾಡಿದರು. ಸದಾಶಿವಪ್ಪ, ಪ್ರಾಚಾರ್ಯ ಶಶಿಧರ ತೋಡ್ಕರ್ ಮತ್ತಿತರರಿದ್ದರು.

ಆರಂಭದಲ್ಲಿ ಜಾನಪದ ಸಂಶೋಧನಾ ಕೇಂದ್ರದ ಮಹಿಳಾ ಘಟಕದವರು ವಚನ ಗೀತೆಗಳನ್ನು ಹಾಡಿದರು. ಗೀತ ಜಯಂತ್ ಸ್ವಾಗತಿಸಿದರು. ವೀರಣ್ಣ ನಿರೂಪಿಸಿದರು.

# ಬೋಧನೆ, ಕಲಿಕೆ ಇಷ್ಟಪಟ್ಟು ಆಗಬೇಕು : ಬಿಇಒ ಪುಷ್ಪಲತಾ

ದಾವಣಗೆರೆ, ಫೆ. 6- ಬೋಧನೆ ಆಗಲಿ, ಕಲಿಕೆ ಆಗಲಿ ಕಷ್ಟಪಟ್ಟು ಆಗಬಾರದು, ಇಷ್ಟಪಟ್ಟು ಆಗಬೇಕು. ಆಗ ಮಾತ್ರ ಅದು ಹೆಚ್ಚು ಕಾಲ ನೆನಪಿನಲ್ಲಿ ಉಳಿಯಬಲ್ಲದು ಎಂದು ದಾವಣಗೆರೆ ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಮತಿ ಪುಷ್ಪಲತಾ ತಿಳಿಸಿದರು.

ಅವರು ಟೆಲಿಗ್ರಾಂ ಆಪ್ ಮುಖಾಂತರ ಆನ್‌ಲೈನ್‌ನಲ್ಲಿ ಕರ್ನಾಟಕ ರಾಜ್ಯ ಶಿಕ್ಷಕರ ಪ್ರತಿಭಾ ಪರಿಷತ್ ಮೈಸೂರು, ಕಲಾವಿದ ಶಿಕ್ಷಕರ ವೇದಿಕೆ ವತಿಯಿಂದ ರಾಜ್ಯಮಟ್ಟದ ಶಿಕ್ಷಕರ ಏಕಪಾತ್ರಾಭಿನಯ ಸ್ಪರ್ಧೆ ಫಲಿತಾಂಶ ಪ್ರಕಟಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದು ಮಾತನಾಡಿದರು.



ಪ್ರತಿಭಾ ಪರಿಷತ್ತಿನ ಕಾರ್ಯದರ್ಶಿ ಸಂತೋಷ್ ಕುಮಾರ್ ಬಂಡೆ ಮಾತನಾಡಿ, ನಮ್ಮ ಕೈಯ್ಯಲ್ಲಿ ಕಲಿಯುವ ಮಕ್ಕಳ ಭವಿಷ್ಯ ಉಜ್ವಲವಾಗುವಂತೆ ಮಾಡಿದಾಗ ಶಿಕ್ಷಕನ ಬದುಕು ಸಾರ್ಥಕವಾಗುತ್ತದೆ. ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು. ಈ ತರಹದ ಕಾರ್ಯಕ್ರಮಗಳು ಅದಕ್ಕೆ ಪೂರಕ ಎಂದು ಸಂತಸವನ್ನು ವ್ಯಕ್ತಪಡಿಸಿದರು ಹಾಗೂ ಆನ್‌ಲೈನ್ ನಲ್ಲಿ ವಿಜೇತರ ಫಲಿತಾಂಶವನ್ನು ಪ್ರಕಟಿಸಿದರು.

ತದನಂತರದಲ್ಲಿ ಶಿಕ್ಷಕರ ಪ್ರತಿಭಾ ಪರಿಷತ್ತಿನ ಸಂಸ್ಥಾಪಕರು ಹಾಗೂ ರಾಜ್ಯಾಧ್ಯಕ್ಷ ಪಿ. ಮಹೇಶ್ , ತಾಂತ್ರಿಕ ವಿಭಾಗದ ಮುಖ್ಯಸ್ಥ ಚಂದ್ರಶೇಖರ್ ನಾಯಕ, ಸಂಪನ್ಮೂಲ ವ್ಯಕ್ತಿ ಬಿ.ಕೆ. ಸತೀಶ್, ರಾಜ್ಯ ಸಹಕಾರ ಸಮಿತಿಯ ಮುಖ್ಯಸ್ಥರಾದ ಉಮಾದೇವಿ ಗುಡ್ಡದ ಅವರು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದ್ದರು.

ವಿಜೇತರಾದ ಕೊಟ್ರೇಶ್, ಶ್ರೀಮತಿ ಲಲಿತಾ ಮಿಣಚಿ, ಕೆಂಚಪ್ಪ, ದಿವಾಕರ್ ಬಲ್ಲಾಳ, ಶ್ರೀಮತಿ ದವಳ ಜೈನ್ ಅವರು ಅವಕಾಶ ಕಲ್ಪಿಸಿಕೊಟ್ಟ ಪ್ರತಿಭಾ ಪರಿಷತ್ತನ್ನು ಮನಸಾರೆ ಹೊಗಳಿದರು.

ಕಾರ್ಯಕ್ರಮದಲ್ಲಿ ಶ್ರೀಮತಿ ಜಯಂತಿ ಹುದ್ದಾರ್ ಪ್ರಾರ್ಥಿಸಿದರು. ಶ್ರೀಮತಿ ಪರ್ವೀನ್ ನದಾಫ್ ಸ್ವಾಗತಿಸಿದರು. ಎಲ್. ಮೂರ್ತಿ ನಿರೂಪಿಸಿದರು. ರುದ್ರಮುನಿ ಅಣಜಿ ವಂದಿಸಿದರು.

## 9ರಂದು ಹೊಸಪೇಟೆಯಲ್ಲಿ ವಿಶ್ವಂಭರ ಭಾಗವತ್‌ರ ಗಾಯನ



ದಾವಣಗೆರೆ, ಫೆ. 6- ಶ್ರೀ ಪುರಂದರದಾಸರ ಆರಾಧನೆ ನಿಮಿತ್ತ ಹೊಸಪೇಟೆಯ ಶ್ರೀ ಉತ್ತರಾದಿಮಠದಲ್ಲಿ ಇದೇ ದಿನಾಂಕ 9ರ ಶುಕ್ರವಾರ ನಡೆಯುವ ಸಂಗೀತ ಮಹೋತ್ಸವ -2024 ಕಾರ್ಯಕ್ರಮದಲ್ಲಿ ನಗರದ ವಿದ್ವಾನ್ ವಿಶ್ವಂಭರ ಭಾಗವತ್‌ರವರು ಗಾಯನ ನಡೆಸಿಕೊಡಲಿದ್ದಾರೆ ಎಂದು ಹೊಸಪೇಟೆ ಶ್ರೀ ಪುರಂದರ ದಾಸರ ಸೇವಾ ಮಂಡಳಿಯು ತಿಳಿಸಿದೆ.


ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ

ಆಡಳಿತ ಮಂಡಳಿ ಚುನಾವಣೆ-2024



ಮಾನ್ಯ ಗೌರವಾನ್ವಿತ ಷೇರುದಾರರೇ, ಗುರು-ಹಿರಿಯರೇ, ಆತ್ಮೀಯ ಸ್ನೇಹಿತರೇ ಹಾಗೂ ಬಂಧು-ಮಿತ್ರರೇ ದಿನಾಂಕ 11.02.2024ರ ಭಾನುವಾರ ನಡೆಯಲಿರುವ ಮೇಲ್ಕಂಡ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನದ ಚುನಾವಣೆಗೆ ನಾನು ನಾಮಪತ್ರ ಸಲ್ಲಿಸಿದ್ದೇನೆ. ಹಿರಿಯರ ಮಾತಿಗೆ ಮನ್ನಣೆ ನೀಡಿ ಹಾಗೂ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗಾಗಿ ಬಿ.ಸಿ. ಉಮಾಪತಿಯವರು - ಕೋಗುಂಡಿ ಬಕ್ಕೇಶಪ್ಪನವರ ಗುಂಪಿಗೆ ಬೆಂಬಲಿಸಿ, ನಾನು ನಾಮಪತ್ರವನ್ನು ಹಿಂಪಡೆದಿದ್ದೇನೆ. ಇಲ್ಲಿಯವರೆಗೂ ನನಗೆ ಸಹಕರಿಸಿದ ಬ್ಯಾಂಕಿನ ಸದಸ್ಯರಿಗೂ ಎಲ್ಲಾ ಷೇರುದಾರರಿಗೂ, ಮಿತ್ರರಿಗೂ, ಬಂಧುಗಳಿಗೂ ಹಾಗೂ ಹಿತೈಷಿಗಳಿಗೂ ತುಂಬು ಹೃದಯ ಧನ್ಯವಾದಗಳನ್ನು ತಿಳಿಸುತ್ತಿದ್ದೇನೆ. ತಮ್ಮ ಅಗಾಧವಾದ ಪ್ರೀತಿ, ವಿಶ್ವಾಸಕ್ಕೆ ನಾನು ಸದಾ ಕಾಲ ಚಿರಋಣಿಯಾಗಿರುತ್ತೇನೆ. ಇದೇ ರೀತಿ ತಮ್ಮ ಪ್ರೀತಿ, ವಿಶ್ವಾಸ ಹಾಗೂ ಆಶೀರ್ವಾದ ಸದಾ ಕಾಲ ನನ್ನ ಮೇಲಿರಲಿ ಎಂದು ಮತ್ತೊಮ್ಮೆ ನಿಮಗೆ ಹೃದಯಪೂರ್ವಕವಾದ ಧನ್ಯವಾದಗಳನ್ನು ತಿಳಿಸುತ್ತೇನೆ.

ತಮ್ಮ ವಿಶ್ವಾಸಿ
ಸ್ವರೂಪ್ ವಿ. ಅಂಗಡಿ.
B.Com, DCA ಮೊ. : 9844746688

ಮಾಲೀಕರು : ಶೋಭ ಬುಕ್ ಡಿಸ್ಟ್ರಿಬ್ಯೂಟರ್ಸ್, ವೈಷ್ಣವಿ ಟ್ರೇಡರ್ಸ್, ಶೋಭ ಬುಕ್ಸ್ & ಸ್ಟೇಷನರಿಸ್ ಶ್ರೀ ವಿರುಪಾಕ್ಷೇಶ್ವರ ಇಂಡಸ್ಟ್ರೀಸ್

ಬಿ.ಸಿ. ಉಮಾಪತಿಯವರು-ಕೋಗುಂಡಿ ಬಕ್ಕೇಶಪ್ಪನವರ ಗುಂಪಿಗೆ ಬೆಂಬಲಿಸಿ.


# ಕೇಂದ್ರ ವಿರುದ್ಧದ ಪ್ರತಿಭಟನೆ : ಜೋಷಿ, ಸಂಸದರಿಗೆ ಆಹ್ವಾನ

ಬೆಂಗಳೂರು, ಫೆ. 6 - ಕೇಂದ್ರ ಸರ್ಕಾರದ ವಿರುದ್ಧ ನಾಳೆ ಬುಧವಾರ ದೆಹಲಿಯ ಜಂತರ್ ಮಂತರ್‌ನಲ್ಲಿ ಆಯೋಜಿಸಿರುವ ಪ್ರತಿಭಟನೆಯಲ್ಲಿ ಪಾಲ್ಗೊಂಡು ರಾಜ್ಯದ ಪರ ನಿಲ್ಲುವಂತೆ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ರಾಜ್ಯಸಭೆಯ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಕೇಂದ್ರ ಸಚಿವರು, ಸಂಸದರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ ಬರೆದು ಆಹ್ವಾನ ನೀಡಿದ್ದಾರೆ. ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಆಗುತ್ತಿರುವ ನಿರಂತರ ಅನ್ಯಾಯ ಮತ್ತು ಅದರಲ್ಲೂ ಕರ್ನಾಟಕದ ವಿಚಾರವಾಗಿ ತೋರುತ್ತಿರುವ ಮಲತಾಯಿ ಧೋರಣೆಯು ನಿಮ್ಮಗಳಿಗೆ ತಿಳಿದ ವಿಷಯವಾಗಿದೆ, ಇದರ ವಿರುದ್ಧ ಪ್ರತಿಭಟಿಸಲು ಮತ್ತು ದೇಶದ ಗಮನ ಸೆಳೆಯಲು ತೀರ್ಮಾನಿಸಲಾಗಿದೆ ಎಂದು ಸಿದ್ದರಾಮಯ್ಯ ಪತ್ರದಲ್ಲಿ ಹೇಳಿದ್ದಾರೆ. ನಾಳೆ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಉಪಮುಖ್ಯಮಂತ್ರಿ ಸೇರಿದಂತೆ ಎಲ್ಲಾ ಸಚಿವರು, ಶಾಸಕರು ಒಂದು ದಿನದ ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದ್ದಾರೆ.

## ರಾಣೇಬೆನ್ನೂರು : ಇಂದು ವಿದ್ಯುತ್ ಇಲ್ಲ

220ಕೆವಿ ವಿ.ಕೇಂದ್ರ, ರಾಣೇಬೆನ್ನೂರು, 110 ಕೆವಿ ಬೇಲೂರು, ಹೀಲದಹಳ್ಳಿ, 110 ಕೆವಿ ಅರೇಮಲ್ಲಾಪುರ, 110 ಕೆವಿ ತುಮ್ಮಿನಕಟ್ಟೆ, 33 ಕೆವಿ ಕುಪ್ಪೇಲೂರು, 33 ಕೆವಿ ಮುದೇ ನೂರು, 33ಕೆವಿ ಚಳಗೇರಿ, 33ಕೆವಿ ಹಲಗೇರಿ, 33ಕೆವಿ ಸುಣಕಲ್ ಬಿದರಿ ಮತ್ತು 66ಕೆವಿ ಹೊಸಪೇಟೆ ವಿದ್ಯುತ್ ಕೇಂದ್ರಗಳು, ರಾಣೇಬೆನ್ನೂರು ತಾಲ್ಲೂಕು, ರಟ್ಟೆಹಳ್ಳಿ ತಾಲ್ಲೂಕು ಮತ್ತು ಹಿರೇಕೆರೂರು ತಾಲ್ಲೂಕಿನ 33 ಕೆವಿ ಲೈನ್, ನಗರ ಮಾರ್ಗಗಳು, ನಿರಂತರ ಯೋಜನೆಯ ಮಾರ್ಗಗಳು ಹಾಗೂ ಎಲ್ಲಾ 11 ಕೆವಿ ಮಾರ್ಗಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.


ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,
ದಾವಣಗೆರೆ

ಅಖಿಲೇಶ್ VOTE FOR YOUTH ಕೋಗುಂಡಿ

VOTE ಆಡಳಿತ ಮಂಡಳಿ ಚುನಾವಣೆ 2024



ಕೋಗುಂಡಿ ಹಾಲಪ್ಪಮೇಷ್ಟ್ರು




ಆತ್ಮೀಯ ಮತ ಬಾಂಧವರೇ,

**ದಿನಾಂಕ: 11-02-2024** ರಂದು ಮೇಲ್ಕಂಡ ಬ್ಯಾಂಕಿನ ಚುನಾವಣೆ ನಡೆಯಲಿದ್ದು **"ನಾನು ನಿಮ್ಮ ಕೋಗುಂಡಿ ಹಾಲಪ್ಪಮೇಷ್ಟ್ರು ಅವರ ಮೊಮ್ಮಗನಾದ ಅಖಿಲೇಶ್ ಪಿ. ಕೋಗುಂಡಿ"** ಈ ಚುನಾವಣೆಯಲ್ಲಿ ಗುರುಹಿರಿಯರ ಹಾಗೂ ತಮ್ಮೆಲ್ಲರ ಆಶೀರ್ವಾದದೊಂದಿಗೆ ನಿರ್ದೇಶಕರ ಸ್ಥಾನಕ್ಕೆ ಇಚ್ಛೆಸಿದ್ದು, ಬ್ಯಾಂಕಿನ ಮತ್ತು ಬ್ಯಾಂಕಿನ ಸದಸ್ಯರ ಸರ್ವತೋಮುಖ ಏಳ್ಗೆಗಾಗಿ ಶ್ರಮಿಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡಲು ಉತ್ಸುಕನಾಗಿದ್ದೇನೆ, ನಾನು ಪ್ರಪ್ರಥಮ ಬಾರಿಗೆ ಹೊಸ ಹೊಸ ಆಲೋಚನೆಗಳೊಂದಿಗೆ [**ಬ್ಯಾಂಕಿಂಗ್ ಕ್ಷೇತ್ರದ ಕಾರ್ಯ ನಿರ್ವಹಣೆ ಇನ್ನಷ್ಟು ಚುರುಕುಗೊಂಡು ಗ್ರಾಹಕರು ಮತ್ತು ಷೇರುದಾರರುಗಳಿಗೆ ಅನುಕೂಲವಾಗುವಂತೆ ಹೆಚ್ಚಿನ ಸೇವೆಯನ್ನು ನೀಡುವ ಸದುದ್ದೇಶದಿಂದ**] ಈ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದೇನೆ, ಆದುದರಿಂದ ತಾವುಗಳು ಮತದಾನ ಮಾಡುವಾಗ **ನಿಮ್ಮ ಮತ ನನಗೂ ಒಂದು ನೀಡಿ** ನನ್ನನ್ನು ಜಯಶೀಲನನ್ನಾಗಿ ಮಾಡಿ ನಿಮ್ಮೆಲ್ಲರ ಸೇವೆಯನ್ನು ಮಾಡಲು ಸದಾವಕಾಶ ಮಾಡಿಕೊಡಬೇಕಾಗಿ ಕೃತಜ್ಞತಾಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ ,

ತಮ್ಮ ಸೇವಾಕಾಂಕ್ಷಿ
ಇಂತಿ ನಿಮ್ಮ ಮನೆಯ ಮಗ
ಅಖಿಲೇಶ್ ಪಿ. ಕೋಗುಂಡಿ
98457 36222

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | ಚಿಹ್ನೆ | |
|---|---|---|---|
| 1 | ಅಖಿಲೇಶ್ ಪಿ. ಕೋಗುಂಡಿ |  | ✗ |

* ಬ್ಯಾಂಕಿನ ಗುರುತಿನ ಚೀಟಿ ತರುವುದು ಕಡ್ಡಾಯ / BANK ID CARD COMPULSORY



ನನ್ನ ನಡೆ ಗ್ರಾಹಕರ ಕಡೆ !
ಎಲ್ಲರಿಗಾಗಿ ನಾನು, ನನಗಾಗಿ ಎಲ್ಲರೂ !!
– ಇದು ಸಹಕಾರತತ್ವದ ಮುಖ್ಯ ಸಂದೇಶ

ಇಂತಹ ಶ್ರೇಷ್ಠ ತತ್ವದ ಬುನಾದಿಯ ಮೇಲೆ ಕಟ್ಟಿರುವದು ಈ ಸಹಕಾರ ಬ್ಯಾಂಕ್

ಪಾರದರ್ಶಕ ವ್ಯವಹಾರ.

ಬ್ಯಾಂಕಿಂಗ್ ಕ್ಷೇತ್ರದಲ್ಲಿನ ಸಾಲ ನೀಡುವ ಮತ್ತು ಅಂಗೈಯಲ್ಲಿ ಹಣಕಾಸಿನ ವ್ಯವಹಾರ ಚಟುವಟಿಕೆಯನ್ನು ಕೈಗೊಳ್ಳಲು ಮತ್ತಷ್ಟು ಮಗದಷ್ಟು ವೇಗವನ್ನು ತರುವುದು.

ಸಾಲದ ಜೊತೆ ವಿಮಾ (Loan insurance) ಭದ್ರತೆಯೊಂದಿಗೆ ಸಾಲ – ಸೌಲಭ್ಯ ನೀಡಿ ಗ್ರಾಹಕರಿಗೆ ಹೊರೆಯಾಗದಂತೆ ಗ್ರಾಹಕರ ಸ್ನೇಹಿಯಾಗಿ ಕೆಲಸ ನಿರ್ವಹಿಸುವುದು.

ಸಾಲ ಪಡೆದ ಗ್ರಾಹಕರ ಆಕಸ್ಮಿಕ ಮರಣಕ್ಕೆ ತುತ್ತಾದಾಗ ವಿಮೆ ಯೋಜನೆಯಡಿ ಸಾಲ ಮರುಪಾವತಿ ಕಾಣುವಂತಾಗಬೇಕು.

ಈಗಿನ ವೇಗದ ಯುಗದಲ್ಲಿ ದ್ವಿಚಕ್ರವಾಹನಗಳಿಗೆ ತ್ವರಿತಗತಿಯಲ್ಲಿ ಸಾಲ–ಸೌಲಭ್ಯವನ್ನು ಪಡೆಯುಂತಾಗಬೇಕು.

ದೈನಂದಿನ ಚಟುವಟಿಕೆ ನಡೆಸುವ ಸಣ್ಣ ಸಣ್ಣ ವ್ಯಾಪಾರ ಮಾಡುವ ವ್ಯಾಪಾರಿಗಳಿಗೆ ಅನುಕೂಲ ಕಲ್ಪಿಸುವಂತೆ ಮತ್ತು ಹೊಸದಾಗಿ ವ್ಯವಹಾರವನ್ನು ಪ್ರಾರಂಭ ಮಾಡುವವರಿಗೆ ತ್ವರಿತಗತಿಯಲ್ಲಿ ಸಾಲ ಸೌಲಭ್ಯವನ್ನು ಒದಗಿಸುವ ಬಗ್ಗೆ.

ಪ್ರಸ್ತುತ ಮಾನ್ಯ ಪ್ರಧಾನಿಗಳ ಅಭಿಲಾಷೆಯಂತೆ ಭಾರತ ದೇಶವನ್ನು ಡಿಜಿಟಲೀಕರಣದಿಂದ ಅಂಗೈಯಲ್ಲಿ ವ್ಯವಹರಿಸೋಣ ಪ್ರಸ್ತುತ ಆಧುನಿಕ ತಂತ್ರಜ್ಞಾನದಲ್ಲಿ ಸಹಕಾರ ಕ್ಷೇತ್ರದಲ್ಲಿಯೂ ಕೂಡ ಗ್ರಾಹಕನಿಗೆ ಆನ್ಲೈನ್ ಬ್ಯಾಂಕಿಂಗ್ (Loan Tracking Process, FASTag Recharge, Online Account Opening, UPI Payments) ವ್ಯವಹಾರವನ್ನು ತರುವ ಬಗ್ಗೆ.

ಶಾಲಾ ಮಕ್ಕಳಿಗೆ ಮೈನರ ಅಕೌಂಟ್‌ನ್ನು (ಉಳಿತಾಯ ಖಾತೆ) ತೆರೆಯುವ ಬಗ್ಗೆ.
ಈ ನಿಟ್ಟಿನಲ್ಲಿ ಇವುಗಳ ಈಡೇರಿಕೆಗೆ ನಿಮ್ಮಗಳ ಸಹಕಾರ ಅತ್ಯಗತ್ಯ.



ಮತದಾನ ದಿನಾಂಕ : 11-02-2024 ರ ಭಾನುವಾರ
ಮತದಾನ ಸ್ಥಳ : ಮೋತಿ ವೀರಪ್ಪ ಕಾಲೇಜು ಆವರಣ

ಅಖಿಲೇಶ್ VOICE OF CUSTOMER ಕೋಗುಂಡಿ

– ಇಂತಿ ನಿಮ್ಮ ಮನೆಯ ಮಗ
ಅಖಿಲೇಶ್ ಪಿ. ಕೋಗುಂಡಿ


ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು
ನನ್ನ ಜನ,
ನನ್ನ ಅಭಿಮಾನ...
ಸನ್ಮಾನ್ಯ ಮುಖ್ಯಮಂತ್ರಿ
ಶ್ರೀ ಸಿದ್ದರಾಮಯ್ಯ ಅವರಿಂದ
ರಾಜ್ಯಮಟ್ಟದ
ಜನಸ್ಪಂದನ
ಫೆಬ್ರವರಿ 2024
ಗುರುವಾರ
08
ವಿಧಾನಸೌಧದ ಮುಂಭಾಗ
ಬೆಳಿಗ್ಗೆ 10.00 ರಿಂದ ಸಂಜೆ 06.00 ರವರೆಗೆ
ಆನ್‌ಲೈನ್‌ನಲ್ಲಿ ನೋಂದಾಯಿಸಲು 1902
ಸೂಚನೆ : ಜನಸ್ಪಂದನದಲ್ಲಿ ಅಹವಾಲು ಸಲ್ಲಿಸಲು ಆಗಮಿಸುವ ನಾಗರಿಕರು ತಮ್ಮ ಗುರುತಿನ ಪತ್ರಗಳಾದ ಆಧಾರ್ ಕಾರ್ಡ್ ಅಥವಾ ಪಡಿತರ ಚೀಟಿ ತರಲು ಕೋರಿದೆ.
ಕರ್ನಾಟಕ ಸರ್ಕಾರ...
ಗ್ಯಾರಂಟಿ ಸರ್ಕಾರ...
ಶಕ್ತಿ
ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಗೃಹಜ್ಯೋತಿ
ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಅನ್ನಭಾಗ್ಯ
ಬಡವರಿಗೆ ಪ್ರತಿ ತಿಂಗಳು 10 kg
5 ಕೆಜಿ ಆಹಾರಧಾನ್ಯ ಬದಲಿಗೆ ರೂ. 170
ಗೃಹಲಕ್ಷ್ಮಿ
ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000
ಯುವನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ
₹3000 ಪದವೀಧರರಿಗೆ
₹1500 ಡಿಪ್ಲೋಮಾ ಪದವೀಧರರಿಗೆ
"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"
CMofKarnataka
https://dipr.karnataka.gov.in/
ಕರ್ನಾಟಕ ವಾರ್ತೆ
ಬ್ರಾಹ್ಮಣ ಸಮುದಾಯ ಮಾಲೀಕತ್ವದ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

# ವಿಶ್ವ ಕ್ಯಾನ್ಸರ್ ದಿನಾಚರಣೆ : ಗಮನ ಸೆಳೆದ ಕ್ಯಾನ್ಸರ್ ಜಾಗೃತಿ ನಡಿಗೆ

ದಾವಣಗೆರೆ, ಫೆ.6- ವಿಶ್ವ ಕ್ಯಾನ್ಸರ್ ದಿನಾಚರಣೆ ಅಂಗವಾಗಿ ಜಿ.ಎಂ. ಫಾರ್ಮಸಿ ಕಾಲೇಜು ಜಿ.ಎಂ. ವಿಶ್ವವಿದ್ಯಾಲಯದ ನೇತೃತ್ವದಲ್ಲಿ ನಗರದಲ್ಲಿ ಕ್ಯಾನ್ಸರ್ ಜಾಗೃತಿಗಾಗಿ ವಾಕಥಾನ್ ಆಯೋಜಿಸಲಾಗಿತ್ತು.

ದಾವಣಗೆರೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸರ್ವೇಲೆನ್ಸ್ ಇಲಾಖೆ, ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆ ಸಹಯೋಗದಲ್ಲಿ, ದಾವಣಗೆರೆ ಕ್ಯಾನ್ಸರ್ ಫೌಂಡೇಷನ್ ಸಹಕಾರದೊಂದಿಗೆ ಈ ಜಾಗೃತಿ ನಡಿಗೆ ಯಶಸ್ವಿಯಾಗಿ ನಡೆಯಿತು. ಚಿಗಟೇರಿ ಜಿಲ್ಲಾ ಆಸ್ಪತ್ರೆ ಆವರಣದಿಂದ ಆರಂಭವಾದ ನಡಿಗೆಯಲ್ಲಿ ಜಿಎಂ ಫಾರ್ಮಸಿ ಕಾಲೇಜು ವಿದ್ಯಾರ್ಥಿಗಳು, ಎನ್.ಎಸ್. ಎಸ್ ಸ್ವಯಂಸೇವಕರು, ಆಸಕ್ತ ನಾಗರಿಕರು, ಗಣ್ಯರು ಹೆಜ್ಜೆ ಹಾಕಿದರು.

ಬೋಲೋ ಭಾರತ್ ಮಾತಾ ಕಿ ಜೈ, ಕ್ಯಾನ್ಸರ್ ಸೆಲ್ ಕಿತ್ತಾಕಿ, ಜಾಗೃತಿಯ ಶಕ್ತಿ - ಕ್ಯಾನ್ಸರ್ ನಿಂದ ಮುಕ್ತಿ ಮೊದಲಾದ ಘೋಷಣೆಗಳೊಂದಿಗೆ ಸಾಗಿದ ಜಾಗೃತಿ ನಡಿಗೆ ವಿದ್ಯಾರ್ಥಿ ಭವನ, ಅಂಬೇಡ್ಕರ್ ವೃತ್ತದ ಮೂಲಕ ಜಯದೇವ ವೃತ್ತ ತಲುಪಿತು. ಅಲ್ಲಿ ವಿದ್ಯಾರ್ಥಿಗಳಿಂದ ಮಾನವ ಸರಪಳಿ ರಚಿಸಲಾಯಿತು.

ಈ ನಡಿಗೆಗೆ ಚಾಲನೆ ನೀಡಿದ ಜಿ.ಎಂ. ವಿಶ್ವವಿದ್ಯಾಲಯದ ಕುಲಾಧಿಪತಿ ಜಿ.ಎಂ.ಲಿಂಗರಾಜು




ಕ್ಯಾನ್ಸರ್ ಬಗ್ಗೆ ಭಯಬೇಡ, ಸೂಕ್ತ ಚಿಕಿತ್ಸೆ ಇದೆ. ಆ ಕುರಿತು ನಾವೆಲ್ಲ ಜಾಗೃತಿ ಮೂಡಿಸಬೇಕಿದೆ ಎಂದು ಕರೆ ನೀಡಿದರು. ವಿಶ್ವಾರಾಧ್ಯ ಆಸ್ಪತ್ರೆಯ ಕ್ಯಾನ್ಸರ್ ತಜ್ಞೆ ಡಾ.ಭಾರತಿ ಕ್ಯಾನ್ಸರ್ ರೋಗಲಕ್ಷಣಗಳು ಹಾಗೂ ಉಪಚಾರದ ವಿಧಾನಗಳನ್ನು ವಿವರಿಸಿದರು. ಈಗ ಒಂದು ಲಕ್ಷ ಜನರಲ್ಲಿ 94 ಮಂದಿಗೆ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ. ಇದಕ್ಕೆ ಒತ್ತಡದ ಜೀವನ ಶೈಲಿ, ತಂಬಾಕು ಮುಂತಾದ ದುಶ್ಚಟಗಳೂ ಕಾರಣ. ಇಂತಹುಗಳಿಂದ ದೂರವಾಗಿ, ಜೀವನ ಶೈಲಿಯನ್ನು ಮಾರ್ಪಾಡು ಮಾಡದಿದ್ದರೆ, ಈ ಸಂಖ್ಯೆ ಇನ್ನೂ ಹೆಚ್ಚಾಗುತ್ತದೆ ಎಂದು ಡಾ.ಮಹಾಂತೇಶ್ ಎಚ್ಚರಿಕೆ ನೀಡಿದರು.

ದಾವಣಗೆರೆ ಕ್ಯಾನ್ಸರ್ ಫೌಂಡೇಶನ್ ಕಾರ್ಯದರ್ಶಿ ಸುಕ್ಷೇಮ ಆಸ್ಪತ್ರೆಯ ಡಾ.ಸುನೀಲ್ ಬ್ಯಾಡಗಿ ಮಾತನಾಡಿ, ಕ್ಯಾನ್ಸರ್ ಚಿಕಿತ್ಸೆಗೆ ಆಧುನಿಕ ವೈದ್ಯಕೀಯ ವ್ಯವಸ್ಥೆ ಸಹಕಾರಿಯಾಗುತ್ತಿದೆ. ಆದ್ದರಿಂದ ರೋಗಿಗಳು ನಿರ್ಭೀತಿಯಿಂದ ಚಿಕಿತ್ಸೆ ಪಡೆಯಬಹುದಾಗಿದೆ ಎಂದರು. ಕ್ಯಾನ್ಸರ್ ಫೌಂಡೇಶನ್ ರಾಯಭಾರಿ ಆರ್.ಟಿ. ಅರುಣ್ ಕುಮಾರ್ ಕ್ಯಾನ್ಸರ್ ರೋಗ ಕಾಣಿಸಿಕೊಂಡಾಗ ಹೆದರದೆ, ಧೈರ್ಯದಿಂದ ಎದುರಿಸಿ ಎಂದು ತಾವು ಹನ್ನೆರಡು ವರ್ಷಗಳ ಹಿಂದೆ ಕ್ಯಾನ್ಸರ್ ಜಯಿಸಿದ್ದನ್ನು ಹೇಳಿ ಉತ್ಸಾಹ ಮೂಡಿಸಿದರು.

ಹರಿಹರದ ಶಾಸಕ ಬಿ.ಪಿ. ಹರೀಶ್, ಪಾಲಿಕೆ ಸದಸ್ಯ ಪ್ರಸನ್ನಕುಮಾರ್, ಡಿ.ಎಚ್.ಓ ಡಾ. ಷಣ್ಮುಖಪ್ಪ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಜಿ.ಡಿ. ರಾಘವನ್, ಜಿಎಂ ಟ್ರಸ್ಟಿ ಜಿ.ಎಸ್. ಅನಿತ್‌ಕುಮಾರ್, ಕುಲಪತಿ ಡಾ. ಎಸ್.ಆರ್. ಶಂಖಪಾಲ್, ಸಹ ಕುಲಪತಿ ಡಾ. ಎಚ್.ಡಿ. ಮಹೇಶಪ್ಪ, ವಿವಿ ರಿಜಿಸ್ಟ್ರಾರ್ ಡಾ.ಸುನಿಲ್, ಡೀನ್ ಡಾ. ಜಿ.ಎಂ. ಪಾಟೀಲ್, ಶಾಸಕ ಬಿ.ಪಿ. ಹರೀಶ್, ಜಿ.ಎಂ. ಫಾರ್ಮಸಿ ಕಾಲೇಜಿನ ಪ್ರಾಚಾರ್ಯ.ಎಂ.ಎಚ್. ಡಾ.ಗಿರೀಶ್ ಬೋಳಕಟ್ಟೆ, ಜಿ.ಎಂ.ಎಸ್. ಪದವಿ ಕಾಲೇಜಿನ ಶ್ವೇತಾ ಮರಿಗೌಡ್ರು, ಪ.ಪೂ ಕಾಲೇಜಿನ ಡಾ. ಓಂಕಾರಪ್ಪ, ಜಿ.ಎಂ. ಸಮೂಹದ ಆಡಳಿತಾಧಿಕಾರಿ ವೈ.ಯು. ಸುಭಾಷ್, ಕಾಲೇಜಿನ ತರಬೇತಿ ಮತ್ತು ನಿಯೋಜನೆ ಅಧಿಕಾರಿ ತೇಜಸ್ವಿ ಕಟ್ಟಿಮನಿ ನಿವೃತ್ತ ಪೊಲೀಸ್ ಅಧಿಕಾರಿ ರವಿನಾರಾಯಣ್, ರೋಟರಿ ಸಂಸ್ಥೆಯ ಸುನೀತಾ ಮೃತ್ಯುಂಜಯ, ಚೂಡಾಮಣಿ ಇತರರಿದ್ದರು.

ಕೊನೆಯಲ್ಲಿ ವಿದ್ಯಾರ್ಥಿಗಳು ಕ್ಯಾನ್ಸರ್ ಜಾಗೃತಿ ಕುರಿತು ಕಿರು ನಾಟಕಗಳನ್ನು ಅಭಿನಯಿಸಿ, ಗಮನ ಸೆಳೆದರು.

## ನಾಗರಿಕ ಸಂಹಿತೆ ಮಸೂದೆ ಮಂಡನೆ

(1ನೇ ಪುಟದಿಂದ) ಜೀವನಾಂಶ ನೀಡುವುದು ಕಡ್ಡಾಯವಾಗಲಿದೆ.

ಈ ಮಸೂದೆಯನ್ನು ಗುಜರಾತ್ ಹಾಗೂ ಅಸ್ಸಾಂ ರೀತಿಯ ಬಿಜೆಪಿ ಆಡಳಿತದ ರಾಜ್ಯಗಳೂ ಅಧ್ಯಯನ ನಡೆಸಿ ಜಾರಿಗೆ ತರಲು ಮುಂದಾಗುವ ಸಾಧ್ಯತೆ ಇದೆ. ಪ್ರಸಕ್ತ ಗೋವಾದಲ್ಲಿ ಮಾತ್ರ ಏಕರೂಪ ನಾಗರಿಕ ಸಂಹಿತೆ ಇದೆ. ಇದನ್ನು ಪೋರ್ಚುಗೀಸರ ಕಾಲದಲ್ಲಿ ಜಾರಿಗೆ ತರಲಾಗಿತ್ತು.

ಈ ಮಸೂದೆಯ ಬಗ್ಗೆ ಚರ್ಚಿಸಲು ಹೆಚ್ಚು ಸಮಯ ಬೇಕು ಎಂದು ಪ್ರತಿಪಕ್ಷಗಳು ಒತ್ತಾಯಿಸಿದವು. ನಂತರ ವಿಧಾನಸಭಾಧ್ಯಕ್ಷರಾದ ರಿತು ಖಂಡೂರಿ ಅವರು ಸಮಯಕ್ಕೆ ಅವಕಾಶ ನೀಡಿದರು.

ಈ ಮಸೂದೆಯು ಉತ್ತರಾಖಂಡದ ಎಲ್ಲ ಜನರು ಹಾಗೂ ಹೊರಗಿನಿಂದ ಬಂದು ನೆಲೆಸಿರುವವರಿಗೂ ಅನ್ವಯವಾಗುತ್ತದೆ. ಆದರೆ, ರಾಜ್ಯದ ಬುಡಕಟ್ಟು ಜನರಿಗೆ ಅನ್ವಯವಾಗುವುದಿಲ್ಲ.

ಲಿವ್ ಇನ್ ಸಂಬಂಧದ ನೋಂದಣಿ ಕಡ್ಡಾಯವಾಗಿದೆ. ಈ ಸಂಬಂಧದಲ್ಲಿ ತೊಡಗಲು ಕನಿಷ್ಠ 18 ವರ್ಷವಾಗಬೇಕಿದೆ. ಆದರೆ, ಇಬ್ಬರಲ್ಲಿ ಯಾರಾದರೂ 21 ವರ್ಷದ ಒಳಗಿನವರಾಗಿದ್ದರೆ, ರಿಜಿಸ್ಟ್ರಾರ್ ಈ ವಿಷಯವನ್ನು ಪೋಷಕರಿಗೆ ತಿಳಿಸಬೇಕಿದೆ.

ನೋಂದಣಿ ಮಾಡಿಸಿಕೊಳ್ಳದವರಿಗೆ ಒಂದು ತಿಂಗಳ ಜೈಲು ಇಲ್ಲವೇ 10 ಸಾವಿರ ರೂ. ದಂಡ ಇಲ್ಲವೇ ಎರಡಕ್ಕೂ ಅವಕಾಶ ಇದೆ. ಸಂಬಂಧ ಬೆಳೆಸಿದ ತಿಂಗಳ ಒಳಗಾಗಿ ನೋಂದಣಿ ಮಾಡಿಸಬೇಕಿದೆ. ತಪ್ಪು ಮಾಹಿತಿ ನೀಡಿದವರಿಗೆ ಹೆಚ್ಚಿನ ದಂಡ ವಿಧಿಸಲಾಗುವುದು.

ಲಿವ್ - ಇನ್ ಸಂಬಂಧದಲ್ಲಿದ್ದ ವ್ಯಕ್ತಿ ತೊರೆದಲ್ಲಿ, ಮಹಿಳೆ ಜೀವನಾಂಶಕ್ಕಾಗಿ ಕೋರ್ಟ್ ಮೊರೆ ಹೋಗಬಹುದು. ಲಿವ್ ಇನ್ ಸಂಬಂಧ ಅಂತ್ಯಗೊಳಿಸಲೂ ಮಸೂದೆಯಲ್ಲಿ ಅವಕಾಶ ಇದೆ.

# ಹರಹರ : ತುಂಗಭದ್ರಾ ನದಿ ದಂಡೆಯ ಮೇಲೆ ಕಸದ ರಾಶಿ...



ಹರಿಹರ, ಫೆ.6- ನಗರದ ತುಂಗಭದ್ರಾ ನದಿಯ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿರುವ ನದಿ ದಂಡೆಯ ಮೇಲೆ ಕಸದ ರಾಶಿ, ಹಳೆಯ ಬಟ್ಟೆಗಳನ್ನು ಎಲ್ಲೆಂದರಲ್ಲಿ ಹಾಕಿದ್ದು ನದಿಯ ದಂಡೆಯು ಕಲುಷಿತ ವಾತಾವರಣದಲ್ಲಿದೆ.

ಈಗಾಗಲೇ ರಾಜ್ಯಾದ್ಯಂತ ಮಳೆ ಕೊರತೆಯಿಂದಾಗಿ ನದಿಯಲ್ಲಿ ನೀರಿನ ಪ್ರಮಾಣ ಅಷ್ಟಕ್ಕಷ್ಟೇ ಇದ್ದು, ನದಿಯಲ್ಲಿ ನೀರು ಇಲ್ಲದೇ ಇರುವುದರಿಂದ ನದಿಯ ದಂಡೆ ಬಹಳಷ್ಟು ಅಗಲವಾಗಿರುತ್ತದೆ ಮತ್ತು ನದಿಯಲ್ಲಿ ನೀರಿನ ಹರಿವಿನ ಪ್ರಮಾಣ ಹೆಚ್ಚಾಗಿ ಇದ್ದಾಗ ಕಸಕಡ್ಡಿ ಹರಿಯುವ ನೀರಿನ ರಭಸಕ್ಕೆ ಕೊಚ್ಚಿಕೊಂಡು ಹೋಗುತ್ತವೆ. ಇದರಿಂದಾಗಿ ನದಿಯ ದಂಡೆ ಕೂಡ ಸ್ವಚ್ಛತೆಯಿಂದ ಕೂಡಿರುತ್ತದೆ.

ಆದರೆ, ಮಳೆ ಇಲ್ಲದೇ ನದಿಯಲ್ಲಿ ನೀರಿನ ಹರಿವಿನ ಪ್ರಮಾಣ ಕಡಿಮೆ ಇರುವುದರಿಂದ ನದಿ ದಂಡೆಯಲ್ಲಿ ಬಿಸಾಡುವ ಪ್ಲಾಸ್ಟಿಕ್ ಚೀಲ, ಪ್ಲಾಸ್ಟಿಕ್ ವಾಟರ್ ಬಾಟಲ್ ಮತ್ತು ಮದ್ಯಪಾನ ಬಾಟಲ್, ಹಳೆಯ ಬಟ್ಟೆಗಳು ನದಿ ದಂಡೆಯ ಮೇಲೆ ಅಧಿಕ ಪ್ರಮಾಣದಲ್ಲಿದ್ದು, ಡ್ಯಾಮ್ ನೀರನ್ನು ನದಿಗೆ ಬಿಟ್ಟರೆ ಕಸವು ನೀರಿನಲ್ಲಿ ಸೇರಿದಾಗ ಸಾರ್ವಜನಿಕರು ಅನೇಕ ರೋಗಗಳಿಗೆ ತುತ್ತಾಗುವ ಸಾಧ್ಯತೆ ಇರುತ್ತದೆ. ಹಾಗಾಗಿ ಈ ಸ್ಥಳಕ್ಕೆ ಸಂಬಂಧಿಸಿದ ಕೋಡಿಯಾಲ ಹೊಸಪೇಟೆ ಗ್ರಾಪಂ ಕಚೇರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ನದಿ ದಂಡೆ ಮೇಲಿರುವ ಕಸದ ರಾಶಿಯ ಸ್ವಚ್ಛತೆಗೆ ಮುಂದಾಗಬೇಕಿದೆ ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

# ಮೇಕೆದಾಟಿಗಾಗಿ ರಾಜ್ಯಸಭೆಯಲ್ಲಿ ಕೈ ಮುಗಿದು ದೇವೇಗೌಡರ ಮನವಿ

ನವದೆಹಲಿ, ಫೆ. 6 – ಕಾವೇರಿ ನದಿಗೆ ಮೇಕೆದಾಟು ಜಲಾಶಯ ನಿರ್ಮಿಸಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ಮಧ್ಯಪ್ರವೇಶ ಮಾಡಬೇಕು. ಕರ್ನಾಟಕದ ನೀರಿನ ಸಂಕಷ್ಟ ಬಗೆಹರಿಸಬೇಕು ಎಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ರಾಜ್ಯಸಭೆಯಲ್ಲಿ ಕೈ ಮುಗಿದು ಮನವಿ ಮಾಡಿದ್ದಾರೆ.

ರಾಷ್ಟ್ರಪತಿ ಭಾಷಣಕ್ಕೆ ಅಭಿನಂದನೆ ಸಲ್ಲಿಸುವ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ರಾಜ್ಯದ ಕುಡಿಯುವ ನೀರಿನ ಸಮಸ್ಯೆಯನ್ನು ಎಳೆಎಳೆಯಾಗಿ ಬಿಡಿಸಿಟ್ಟರಲ್ಲದೆ, ಕೇಂದ್ರ ಸರ್ಕಾರವು 30 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯದ ಮೇಕೆದಾಟು ಯೋಜನೆಗೆ ಒಪ್ಪಿಗೆ ನೀಡಬೇಕು ಎಂದು ಮನವಿ



ಮಾಡಿದರು.

ತಮಿಳುನಾಡು ಪರ ಹಿರಿಯ ವಕೀಲರೇ ಮೇಕೆದಾಟು ಯೋಜನೆಯ ಪರವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಹೇಳಿಕೆ ನೀಡಿದ್ದಾರೆ. ಈಗಲಾದರೂ ಮೇಕೆದಾಟು ಯೋಜನೆ ಜಾರಿಯಾಗಬೇಕು ಎಂದು ಹೇಳಿದರು. ರಾಜ್ಯದಲ್ಲಿ ಕಾಡುಗೊಲ್ಲ ಸಮುದಾಯ ಮೀಸಲು ಸೌಲಭ್ಯದಿಂದ ವಂಚಿತವಾಗಿ ಅನ್ಯಾಯಕ್ಕೆ ತುತ್ತಾಗಿದೆ. 2014ರಿಂದಲೂ ಇವರನ್ನು ಎಸ್ಟಿ ಪ್ರವರ್ಗಕ್ಕೆ ಸೇರಿಸುವ ಪ್ರಸ್ತಾವನೆ ಇತ್ತು. ಕರ್ನಾಟಕದ 13 ಜಿಲ್ಲೆಗಳಲ್ಲಿರುವ ಕಾಡುಗೊಲ್ಲ ಸಮುದಾಯದ ಹಿತಕ್ಕಾಗಿ ಪ್ರಧಾನಿಗಳು ನಿರ್ಧಾರ ಪ್ರಕಟಿಸಬೇಕು ಎಂದವರು ಆಗ್ರಹಿಸಿದರು.

ಕರ್ನಾಟಕ ಸರ್ಕಾರ ಅಲ್ಪಾವಧಿ ಲಾಭಕ್ಕಾಗಿ ಅನುತ್ಪಾದಕ ಗ್ಯಾರಂಟಿಗಳನ್ನು ಜಾರಿಗೆ ತಂದಿದೆ ಎಂದು ದೇವೇಗೌಡರು ಇದೇ ಸಂದರ್ಭದಲ್ಲಿ ಟೀಕಿಸಿದರು.

ರಾಜ್ಯ ಸರ್ಕಾರ ದೆಹಲಿಯಲ್ಲಿ ಬೃಹತ್ ಪ್ರತಿಭಟನೆ ಆಯೋಜಿಸಿದ್ದು, ನಾವೂ ಪಾಲ್ಗೊಳ್ಳಬೇಕೆಂದು ಆಹ್ವಾನಿಸಿದೆ. ಆದರೆ, ಕೇರಳದಲ್ಲಿ ಇದೇ ಉದ್ದೇಶಕ್ಕೆ ಅಲ್ಲಿನ ಎಲ್ ಡಿಎಫ್ ಸರ್ಕಾರ ಕರೆದರೆ ಕಾಂಗ್ರೆಸ್‌ನವರು ಬಹಿಷ್ಕಾರ ಹಾಕುತ್ತಾರೆ. ಇದು ರಾಜಕೀಯ ಪರಿಸ್ಥಿತಿ ಎಂದು ಗೌಡರು ಹೇಳಿದರು.

## ನಗರದಲ್ಲಿ ಇಂದು ವಿಶೇಷ ಚೇತನರ ಕಲ್ಯಾಣ ಕ್ರಿಯಾ ಯೋಜನೆ ತಯಾರಿಕೆ ಕಾರ್ಯಾಗಾರ

ಜಿಲ್ಲಾಡಳಿತ, ಮಹಾನಗರ ಪಾಲಿಕೆ, ಜಿಲ್ಲಾ ಪಂಚಾಯಿತಿ ಮತ್ತು ಸ್ಫೂರ್ತಿ ಸಂಸ್ಥೆ ದಾವಣಗೆರೆ ಇವರುಗಳ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮಹಾನಗರ ಪಾಲಿಕೆ ಮತ್ತು ವಿವಿಧ ಇಲಾಖೆ ಅಧಿಕಾರಿಗಳಿಗೆ ಶೇ.5 ರ ಅನುದಾನದಡಿಯಲ್ಲಿ ವಿಶೇಷ ಚೇತನರ ಕಲ್ಯಾಣ ನಿಧಿಯಡಿ ಕ್ರಿಯಾ ಯೋಜನೆ ತಯಾರಿಸುವುದು ಹಾಗೂ ಇದರ ಅಡೆ-ತಡೆ ನಿವಾರಣೆ ಕುರಿತು ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಉದ್ಘಾಟಿಸುವರು. ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯ ದರ್ಶಿ ಮಹಾವೀರ್ ಮ.ಕರೆಣ್ಣವರ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್, ಪಾಲಿಕೆ ಆಯುಕ್ತರಾದ ರೇಣುಕ, ವಿ.ಹಿ.ನಾ.ಸ ಇಲಾಖೆಯ ರಾಜ್ಯ ಆಯುಕ್ತರಾದ ರಾಜಣ್ಣ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣಾಧಿಕಾರಿ ಡಾ.ಕೆ. ಪ್ರಕಾಶ, ರಾಷ್ಟ್ರೀಯ ದೃಷ್ಟಿ ದೋಷರ ಒಕ್ಕೂಟದ ರಾಜ್ಯ ಕಾರ್ಯದರ್ಶಿ ಎಂ. ವೀರೇಶ್, ಸ್ಫೂರ್ತಿ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಕೆ.ಬಿ. ರೂಪ್ಲನಾಯ್ಕ ಭಾಗವಹಿಸುವರು.

## ಇಂದು ಕೇಂದ್ರದ ವಿರುದ್ಧ ಪ್ರತಿಭಟನೆ

(1ನೇ ಪುಟದಿಂದ) ಮೋದಿ ನೇತೃತ್ವದ ಸರ್ಕಾರದ ಪ್ರಸಕ್ತ ಸಾಲಿನ ಕೊನೆಯ ಮುಂಗಡ ಪತ್ರದಲ್ಲಿ ರಾಜ್ಯ ಸರ್ಕಾರಕ್ಕೆ ನೀಡಬೇಕಾದ ಅನುದಾನದಲ್ಲಿ ಕೊರತೆ ಮತ್ತು ತಮ್ಮ ಪಾಲಿನ ಹಣವನ್ನು ನೀಡುತ್ತಿಲ್ಲ ಎಂದು ಆರೋಪಿಸಿ ಈ ಪ್ರತಿಭಟನೆ ನಡೆಯುತ್ತಿದೆ. ಈಗಾಗಲೇ ಕೇರಳ, ಪಶ್ಚಿಮ ಬಂಗಾಳ ಹಾಗೂ ತಮಿಳುನಾಡು ಸರ್ಕಾರಗಳು ಕೇಂದ್ರದ ವಿರುದ್ಧ ಪ್ರತಿಭಟನೆ ನಡೆಸಿದ್ದವು. ಪ್ರತಿಭಟನೆಯಲ್ಲಿ ಭಾಗಹಿಸಲು ರಾಜ್ಯವನ್ನು ಪ್ರತಿನಿಧಿಸುತ್ತಿರುವ ಕೇಂದ್ರ ಸಚಿವರೂ ಮತ್ತು ಸಂಸದರಿಗೂ ಮುಖ್ಯಮಂತ್ರಿ ಅವರು ಪತ್ರ ಬರೆದು ಮನವಿ ಮಾಡಿದ್ದಾರೆ.

ಕೇಂದ್ರದ ವಿರುದ್ಧ ನಡೆಸುತ್ತಿರುವ ಪ್ರತಿಭಟನೆ ರಾಷ್ಟ್ರದ ಗಮನ ಸೆಳೆಯುವ ಉದ್ದೇಶದಿಂದ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೋಮವಾರವೇ ದೆಹಲಿಗೆ ತೆರಳಿದರೆ, ಮುಖ್ಯಮಂತ್ರಿ ಹಾಗೂ ಅವರ ಸಂಪುಟದ ಸದಸ್ಯರು ಮತ್ತು ಶಾಸಕರು ಮಂಗಳವಾರ ದೆಹಲಿ ತಲುಪಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾರ್ಗದರ್ಶನದಲ್ಲೇ ಈ ಪ್ರತಿಭಟನೆ ನಡೆಯುತ್ತಿದೆ. ಧರಣಿ ನಂತರ ಮುಖ್ಯಮಂತ್ರಿ ಸೇರಿದಂತೆ ರಾಜ್ಯದ ಎಲ್ಲಾ ಸಚಿವ, ಶಾಸಕರು ಮತ್ತು ಸಂಸದರಿಗೆ ಖರ್ಗೆ ಅವರು ತಮ್ಮ ಮನೆಯಲ್ಲಿ ಔತಣ ಕೂಟ ಏರ್ಪಡಿಸಿದ್ದಾರೆ.

## ಕ್ರಿಕೆಟ್ ಭೀಷ್ಮ ಸಿ.ಕೆ.ಮೂರ್ತಿ ಸ್ಮರಣಾರ್ಥ ಟೂರ್ನಿ

### ಇಂದು, ಐದು ತಂಡಗಳ ಟಿ-20 ಟೂರ್ನಿಗೆ ದಿನೇಶ್ ಶೆಟ್ಟಿ ಚಾಲನೆ

ದಾವಣಗೆರೆ ಕ್ರಿಕೆಟ್ ಭೀಷ್ಮ ಖ್ಯಾತಿಯ ದಾವಣಗೆರೆ ಕ್ರಿಕೆಟ್ ಕ್ಲಬ್‌ನ ಕ್ರಿಕೆಟ್ ಗುರು ದಿ. ಸಿ.ಕೆ.ಮೂರ್ತಿ ಸ್ಮರಣಾರ್ಥ ಕ್ರಿಕೆಟ್ ಪ್ರತಿಭಾನ್ವೇಷಣೆಗೆ ಪೂರಕವಾಗಿ ಇಂದು ಮತ್ತು ನಾಳೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಐದು ತಂಡಗಳನ್ನು ಒಳಗೊಂಡ ಡಿಸಿಸಿ ಗುರು ಸಿ.ಕೆ.ಮೂರ್ತಿ ಸ್ಮರಣಾರ್ಥ ಟಿ-20 ಕ್ರಿಕೆಟ್ ಪಂದ್ಯಾವಳಿ-2024ನ್ನು ಹಮ್ಮಿಕೊಳ್ಳಲಾಗಿದೆ.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಇಂದು ಬೆಳಿಗ್ಗೆ 9ಕ್ಕೆ ದಾವಣಗೆರೆ ಕ್ರಿಕೆಟ್ ಕ್ಲಬ್ ಕಾರ್ಯದರ್ಶಿ, ಹಿರಿಯ ಕ್ರೀಡಾಪಟು ದಿನೇಶ್ ಕೆ.ಶೆಟ್ಟಿ ಪಂದ್ಯಾವಳಿ ಉದ್ಘಾಟಿಸುವರು. ಕ್ಲಬ್‌ನ ಹಿರಿ ಹಾಗೂ ಕಿರಿಯ ಕ್ರೀಡಾಪಟುಗಳು ಭಾಗವಹಿಸುವರು. ಐದು ತಂಡಗಳು



ಪಾಲ್ಗೊಳ್ಳುವ ಪಂದ್ಯಾವಳಿಯು ಲೀಗ್ ಮಾದರಿಯಾಗಿದೆ. ಟಿ-20 ಬಿಳಿ ಬಣ್ಣದ ಬಾಲ್‌ಗಳ ಪಂದ್ಯಾವಳಿ ಇದಾಗಿದೆ ಎಂದು ಪಂದ್ಯಾವಳಿಯ ಉಸ್ತುವಾರಿಯಾದ ಹಿರಿಯ ಕ್ರಿಕೆಟ್ ಪಟು ಕುಮಾರ್ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

# ಕಾಂಗ್ರೆಸ್ ಪ್ರತಿಭಟನೆಗೆ ಸರ್ಕಾರಿ ಹಣ ಬಳಕೆ

### ರಾಜ್ಯಪಾಲರಿಗೆ ಬಿಜೆಪಿ ದೂರು

ಬೆಂಗಳೂರು, ಫೆ. 6 - ಕೇಂದ್ರ ಸರ್ಕಾರದ ವಿರುದ್ಧ ನಡೆಸಲಾಗುತ್ತಿರುವ 'ಚಲೋ ದೆಹಲಿ' ಪ್ರತಿಭಟನೆಗಾಗಿ ಪತ್ರಿಕೆಗಳಲ್ಲಿ ಜಾಹೀರಾತು ನೀಡಲು ಸರ್ಕಾರಿ ಹಣ ಬಳಸಿಕೊಳ್ಳಲಾಗಿದೆ ಎಂದು ಬಿಜೆಪಿ ಟೀಕಿಸಿದೆ. ಈ ಬಗ್ಗೆ ರಾಜ್ಯ ಸರ್ಕಾರದ ವಿರುದ್ಧ ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ಅವರ ಬಳಿ ಪ್ರತಿಭಟನೆ ದಾಖಲಿಸಿದೆ.

ದೆಹಲಿಯಲ್ಲಿ ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಹಲವಾರು ಪತ್ರಿಕೆಗಳಲ್ಲಿ ಜಾಹೀರಾತು ನೀಡಿ, 'ಚಲೋ ದೆಹಲಿ'ಯಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡಲಾಗಿತ್ತು.

ಈ ಬಗ್ಗೆ ಗೆಹ್ಲೋಟ್ ಅವರಿಗೆ ದೂರು ನೀಡಿರುವ ಬಿಜೆಪಿ, ತಪ್ಪು ಮಾಹಿತಿ ಮೂಲಕ ರಾಜ್ಯದ ಜನರನ್ನು ಪ್ರಚೋದಿಸಲಾಗುತ್ತಿದೆ. ಕೇಂದ್ರದ ವಿರುದ್ಧ ಜಾಹೀರಾತುಗಳಿಗಾಗಿ ರಾಜ್ಯ ಸರ್ಕಾರದ ಹಣ ಬಳಸಿಕೊಳ್ಳಲಾಗುತ್ತಿದೆ. ಇದು ರಾಜ್ಯ ಸರ್ಕಾರದ ಅಕ್ರಮಗಳಲ್ಲಿಯೇ ಅತ್ಯಂತ ಆಘಾತಕಾರಿ ಎಂದು ತಿಳಿಸಿದೆ.

ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ವಿರುದ್ಧ ಜಾಹೀರಾತು ಪ್ರಕಟಿಸಿದೆ. ಆದರೆ, ಇದು ಕಾಂಗ್ರೆಸ್ ಪಕ್ಷವು ಕೇಂದ್ರದ ಬಿಜೆಪಿ ಸರ್ಕಾರದ ವಿರುದ್ಧ ಜನರನ್ನು ಪ್ರಚೋದಿಸಲು ನೀಡಿರುವ ಜಾಹೀರಾತಾಗಿದೆ. ಇದಕ್ಕಾಗಿ ರಾಜ್ಯ ಸರ್ಕಾರ ಏಕೆ ಹಣ ಪಾವತಿಸಬೇಕು? ಎಂದು ಬಿಜೆಪಿ ಪ್ರಶ್ನಿಸಿದೆ.

ಜನರ ಹಣವನ್ನು ರಾಜಕೀಯ ಉದ್ದೇಶಗಳಿಗೆ ಬಳಸಲಾಗುತ್ತಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯ ಸರ್ಕಾರದ ಹಣವನ್ನು ಜನರ ಪ್ರಚೋದನೆಗೆ ಬಳಸುವುದು ಹಾಗೂ ಕೇಂದ್ರದ ವಿರುದ್ಧ ಪ್ರತಿಭಟನೆಗಳಿಗೆ ಬರುವಂತೆ ಜನರಿಗೆ ಕರೆ ನೀಡುವುದು ಸಂವಿಧಾನ ಬಾಹಿರ ಎಂದು ಬಿಜೆಪಿ ಹೇಳಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಗ್ಯಾರಂಟಿ ಯೋಜನೆಗಳನ್ನು ನಿಭಾಯಿಸಲು ಸಾಧ್ಯವಾಗದೇ ಆರ್ಥಿಕ ಸಮತೋಲನ ಕಾಯ್ದುಕೊಳ್ಳುವಲ್ಲಿ ಕಾಂಗ್ರೆಸ್ ಸರ್ಕಾರ ವಿಫಲವಾಗಿದೆ. ಬೊಕ್ಕಸ ಬರಿದು ಮಾಡಿಕೊಂಡಿರುವ ಕಾಂಗ್ರೆಸ್ ಸರ್ಕಾರ, ತನ್ನ ಆಡಳಿತ ವೈಫಲ್ಯ ಮುಚ್ಚಿಕೊಳ್ಳಲು ತೆರಿಗೆ ಬಾಕಿಯ ನೆಪ ಮಾಡಿಕೊಂಡು ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟಿಸಲು ಹೊರಟಿದೆ ಎಂದು ಆರೋಪಿಸಿದ್ದಾರೆ.

## 29 ದರದಲ್ಲಿ ಅಕ್ಕಿ

(1ನೇ ಪುಟದಿಂದ) ತೆಗೆದುಕೊಳ್ಳುತ್ತಿದೆ. ನಫೆಡ್, ಎನ್.ಸಿ.ಸಿ.ಎಫ್. ಹಾಗೂ ಕೇಂದ್ರೀಯ ಭಂಡಾರಗಳ ಮೂಲಕ ಈ ಅಕ್ಕಿಯನ್ನು ಮಾರಲಾಗುವುದು. ಇ-ವಾಣಿಜ್ಯ ವೇದಿಕೆಗಳ ಮೂಲಕವೂ ಅಕ್ಕಿ ಮಾರಾಟವಾಗಲಿದೆ.

## ವಿದ್ಯುತ್ ವ್ಯತ್ಯಯ

ಪಾಲಿಕೆ ವತಿಯಿಂದ ರಸ್ತೆ ಕಾಮಗಾರಿ ಕೈಗೊಂಡಿರುವುದರಿಂದ ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಎಂ.ಸಿ.ಸಿ. ಬಿ ಎಫ್-2 ಫೀಡರ್ ವ್ಯಾಪ್ತಿಯ ಶಾಮನೂರು ರಸ್ತೆ, ಎಸ್.ಎಸ್. ಲೇಔಟ್ ಎ ಬ್ಲಾಕ್, ಕುವೆಂಪು ನಗರ, ಸಿದ್ದವೀರಪ್ಪ ಬಡಾವಣೆ, ಎಂ.ಸಿ.ಸಿ. ಬಿ ಬ್ಲಾಕ್, ಬಿಐಇಟಿ ರಸ್ತೆ, ಗ್ಲಾಸ್‌ಹೌಸ್ ಏರಿಯಾ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

## ಬಿದರಗಡ್ಡೆ : ಇಂದು ವಿದ್ಯುತ್ ವ್ಯತ್ಯಯ

ಹೊನ್ನಾಳಿ : ತಾಲ್ಲೂಕಿನ ಬಿದರಗಡ್ಡೆ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಇಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ 220 ಕೆವಿ ಬಿದರಗಡ್ಡೆ ವಿದ್ಯುತ್ ವಿತರಣಾ ಕೇಂದ್ರದಲ್ಲಿ 100 ಎಂವಿಎ ಶಕ್ತಿ ಪರಿವರ್ತಕ-1, 12.5 ಎಂವಿಎ ಶಕ್ತಿ ಪರಿವರ್ತಕ-2 ರ ಒ.ಎಲ್.ಟಿ.ಸಿ. ಓವರ್ ಹಾಲಿಂಗ್ ಕಾರ್ಯವನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿ) 220 ಕೆವಿ ಬಿದರಗಡ್ಡೆ ವಿದ್ಯುತ್ ವಿತರಣಾ ಕೇಂದ್ರ ಇವರು ಹಮ್ಮಿಕೊಂಡಿರುತ್ತಾರೆ. 220 ಕೆವಿ ಬಿದರಗಡ್ಡೆ ವಿದ್ಯುತ್ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ 66/11 ಕೆವಿ ಕುಂದೂರು, 66/11 ಕೆವಿ ಸಾಸ್ವೇಹಳ್ಳಿ ವಿದ್ಯುತ್ ವಿತರಣಾ ಕೇಂದ್ರಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

## ಕಾರಾಗೃಹದ ಗ್ರಂಥಾಲಯದಲ್ಲಿ ಗಾಂಜಾ, ಡಾಟಾ ಕೇಬಲ್ ಪತ್ತೆ

ದಾವಣಗೆರೆ, ಫೆ.6- ಇಲ್ಲಿನ ಜಿಲ್ಲಾ ಕಾರಾಗೃಹದ ಗ್ರಂಥಾಲಯದಲ್ಲಿ ಫೆಬ್ರವರಿ 4ರಂದು ನಿಷೇಧಿತ ಗಾಂಜಾ ಸೊಪ್ಪು ಹಾಗೂ ಮೊಬೈಲ್ ಡಾಟಾ ಕೇಬಲ್‌ಗಳು ಪತ್ತೆಯಾಗಿವೆ. ಜ.28ರಂದು ಕಾರಾಗೃಹದಲ್ಲಿ ಕೈದಿಗಳ ನಡುವೆ ಗಲಾಟೆ ನಡೆದಿತ್ತು. ಗಲಾಟೆ ಹಿನ್ನೆಲೆಯಲ್ಲಿ ಪ್ರಧಾನ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರು ಜೈಲಿಗೆ ಭೇಟಿ ನೀಡಿ ಹಲ್ಲೆಗೊಳಗಾದ ಕೈದಿಗಳ ವಿಚಾರಣೆ ನಡೆಸಿದ್ದರು. ಆಗ ಈ ಮಾಹಿತಿ ಬಹಿರಂಗವಾಗಿದೆ.

ವಿಚಾರಣಾಧೀನ ಕೈದಿಗಳಾದ ಸುನಿಲ್, ಪವನ್‌ಕುಮಾರ್, ಇಮ್ರಾನ್ ಖಾನ್, ಸಲ್ಮಾನ್, ಮಾದಕ ದ್ರವ್ಯ ಸೇವಿಸಿ ಸಹ ಕೈದಿಗಳ ಮೇಲೆ ಹಲ್ಲೆ ನಡೆಸಿದ್ದರು. ಇವರ ರಕ್ತ, ಮೂತ್ರದ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಿದಾಗ ಮಾದಕ ದ್ರವ್ಯದ ಅಂಶ ಪತ್ತೆಯಾಗಿದೆ. ಪುಸ್ತಕವೊಂದರಲ್ಲಿ 3.5 ಗ್ರಾಂ ಗಾಂಜಾ ಸೊಪ್ಪು ಹಾಗೂ ಮೊಬೈಲ್ ಚಾರ್ಜರ್ ಅಡಗಿಸಿಟ್ಟಿದ್ದನ್ನು ಕೈದಿ ಸಂಜೀತ್ ಸಿಂಗ್ ಎಂಬಾತ ನ್ಯಾಯಾಧೀಶರಿಗೆ ತೋರಿಸಿದ್ದ. ಗ್ರಂಥಾಲಯದ ತಪಾಸಣೆ ವೇಳೆ ಪೆನ್‌ಡ್ರೈವ್ ಕೂಡ ದೊರೆತಿದೆ.

ಈ ಸಂಬಂಧ ಜಿಲ್ಲಾ ಕಾರಾಗೃಹದ ಪ್ರಭಾರ ಅಧೀಕ್ಷಕಿ ಭಾಗೀರಥಿ ಎಲ್. ಹಾಗೂ ಜೈಲರ್ ಕೆ.ಎಸ್.ಮಾನ್ವಿ ವಿರುದ್ಧ ಶಿವಮೊಗ್ಗ ಕೇಂದ್ರ ಕಾರಾಗೃಹದ ಅಧೀಕ್ಷಕಿ ಅನಿತಾ ಆರ್. ಅವರು ಇಲ್ಲಿನ ಬಸವನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ.

**WANTED**

We are in urgently need of a qualified English and Kannada Typist who can handle M.S. Word & Excel Independently.
Interested Candidates may send their Resume or Contact at the following address :

**M/S R. HANUMANTHAPPA & SON**
Hanumanthappa Building, P.B. Road, Davangere-2.
**Mobi. : 94498 28834**

**ಮಾನ್ಯ ಭೂ ದಾಖಲೆಗಳ ಉಪನಿರ್ದೇಶಕರ ನ್ಯಾಯಾಲಯ, ದಾವಣಗೆರೆ**

**ಭೂ.ಉ.ನಿ. ಅಪೀಲು ಸಂಖ್ಯೆ 556/2023-24**

**ಅಪೀಲುದಾರರು :** ಶ್ರೀ ಪ್ರತಾಪ್ ರೆಡ್ಡಿ ಬಿನ್ ಸಂಕಿರೆಡ್ಡಿ, ವಯಸ್ಕರು, ವ್ಯವಸಾಯಗಾರರು, ವಾಸ ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ. **ವಿರುದ್ಧ**
**ಎದುರುದಾರರು :** ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ದಾವಣಗೆರೆ ತಾಲ್ಲೂಕು, ದಾವಣಗೆರೆ ಮತ್ತು ಇತರರು
ಎದುರುದಾರರು ನಂ. 2 - ರಮಾದೇವಿ ಕೋಂ ಲೇಟ್ ಕಾಶಿರೆಡ್ಡಿ
ಎದುರುದಾರರು ನಂ. 3 - ಜೀವನ್ ಅಕ್ಷತಾ ಯಾನೆ ಜೀವನ್ ಹರ್ಷಿತ. 2 ಮತ್ತು 3ನೇ ಎದುರುದಾರರು ವಯಸ್ಕರು, ವಾಸ ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ.

**ಸಿ.ಪಿ.ಸಿ. ಆದೇಶ 5 ನಿಯಮ 20ರ ಅಡಿಯಲ್ಲಿ ನೀಡಲಾದ ಪ್ರಕಟಣಾ ನೋಟೀಸು**

ಮೇಲ್ಕಂಡ ಅಪೀಲುದಾರರು ಘನ ನ್ಯಾಯಾಲಯದಲ್ಲಿ ಪೋಡುಗಳನ್ನು ರದ್ದುಪಡಿಸಿ ಹೊಸ ಪೋಡುಗಳನ್ನು ಮಾಡಿಸಿಕೊಡುವಂತೆ ಸದರಿ ಮೇಲ್ಕಂಡ ಪ್ರಕರಣವನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ 2 ಮತ್ತು 3ನೇ ಎದುರುದಾರರು ನಿಮ್ಮ ತಕರಾರು ಏನೇ ಇದ್ದಲ್ಲಿ ಕಾರಣ ಹಾಜರಾತಿಗಾಗಿ ದಿನಾಂಕ 08.02.2024ರಂದು ಮಧ್ಯಾಹ್ನ 3.00 ಗಂಟೆಗೆ ನೀವು ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸಬಹುದು. ತಪ್ಪಿದ್ದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾಗುವುದು.

ಷೆಡ್ಯೂಲ್

ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಹದಡಿ ಗ್ರಾಮದ ಸರ್ವೇ ನಂ. 20/1ರಿಂದ 7ರಲ್ಲಿನ ಪೋಡುಗಳನ್ನು ರದ್ದುಪಡಿಸುವ ಕುರಿತಂತೆ.

ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ದಿನಾಂಕ 31.01.2024ರಂದು ಕೊಡಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ
**ಶಿರಸ್ತೇದಾರರು / ಸೂಪರಿಂಟೆಂಡೆಂಟ್**
ಡಿ.ಡಿ.ಎಲ್.ಆರ್. ನ್ಯಾಯಾಲಯ, ದಾವಣಗೆರೆ.

# ಪ್ರತಿಭಟನೆ ವೇಳೆ ಸಾರ್ವಜನಿಕರಿಗೆ ತೊಂದರೆ

### ಮುಖ್ಯಮಂತ್ರಿ ಸಿದ್ದರಾಮಯ್ಯಗೆ ದಂಡ

### 10 ಸಾವಿರ ರೂ. ದಂಡ ವಿಧಿಸಿದ ಹೈಕೋರ್ಟ್

### ಪ್ರಕರಣ ರದ್ದು ಮಾಡಲು ನಿರಾಕರಣೆ

ಬೆಂಗಳೂರು, ಫೆ. 6 - ಪ್ರತಿಭಟನೆ ಸಂದರ್ಭದಲ್ಲಿ ಸಾರ್ವಜನಿಕರಿಗೆ ತೊಂದರೆ ನೀಡಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹೈಕೋರ್ಟ್ 10 ಸಾವಿರ ರೂ. ದಂಡ ವಿಧಿಸಿದೆ.

ಅಷ್ಟೇ ಅಲ್ಲ, ಅವರ ವಿರುದ್ಧ ದಾಖ ಲಾಗಿದ್ದ ಪ್ರಕರಣವನ್ನು ರದ್ದು ಮಾಡಲು ನ್ಯಾಯಾಲಯ ನಿರಾಕರಿಸಿದೆ.

ಕೆ.ಎಸ್.ಈಶ್ವರಪ್ಪ ಅವರು ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ 2022ರಲ್ಲಿ ಪ್ರತಿಭಟನೆ ನಡೆಸಿ, ರಸ್ತೆ ತಡೆ ಮಾಡಿ ಸಾರ್ವಜನಿಕರಿಗೆ ಅಡ್ಡಿಪಡಿಸಿದ ಆರೋಪ ಇವರೂ ಸೇರಿದಂತೆ ಕೆಲವು ಕಾಂಗ್ರೆಸ್ ಮುಖಂಡರ ಮೇಲಿತ್ತು.

ತಮ್ಮ ವಿರುದ್ಧದ ಪ್ರಕರಣ ರದ್ದು ಕೋರಿ ಸಿದ್ದರಾಮಯ್ಯ, ಸಚಿವರಾದ ಎಂ.ಬಿ. ಪಾಟೀಲ್, ರಾಮಲಿಂಗಾರೆಡ್ಡಿ, ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಎಐಸಿಸಿ ಪ್ರಧಾನಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರ ನ್ಯಾಯಪೀಠ ಈ ತೀರ್ಪು ನೀಡಿದೆ.

ದಂಡ ವಿಧಿಸಿದ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸುವವರೆಗೆ ಆದೇಶಕ್ಕೆ ತಡೆ ನೀಡಬೇಕೆಂದು ಸಿದ್ದರಾಮಯ್ಯ ಪರ ವಕೀಲರು ಮಾಡಿದ ಮನವಿಯನ್ನೂ ಪೀಠ ತಿರಸ್ಕರಿಸಿದೆ. ಅಷ್ಟೇ ಅಲ್ಲ, ಮಾರ್ಚ್ 6ರಂದು ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ಗೆ ಹಾಜರಾಗಲು ಸೂಚನೆ ನೀಡಿದೆ.

ಜನಪ್ರತಿನಿಧಿಗಳ ಕೋರ್ಟ್ ಮುಂದೆ ಮಾರ್ಚ್ 7ರಂದು ರಾಮಲಿಂಗಾ ರೆಡ್ಡಿ, 11ರಂದು ರಣದೀಪ್ ಸಿಂಗ್ ಸುರ್ಜೇವಾಲಾ, 15ಕ್ಕೆ ಎಂ.ಬಿ. ಪಾಟೀಲ್ ಹಾಜರಾಗಬೇಕೆಂದು ನ್ಯಾಯಪೀಠ ಆದೇಶಿಸಿದೆ.

ಒಂದೇ ದಿನ ಎಲ್ಲರಿಗೂ ಅವಕಾಶ ಮಾಡಿಕೊಟ್ಟರೆ ನ್ಯಾಯಾಲಯದ ಸಭಾಂಗಣದಲ್ಲಿ ಗದ್ದಲ ಉಂಟಾಗುತ್ತದೆ ಎಂದು ಬೇರೆ ಬೇರೆ ದಿನಗಳನ್ನು ನಿಗದಿ ಮಾಡಲಾಗಿದೆ ಎಂದಿದೆ.

ಪ್ರತಿಭಟನಾನಿರತರ ವಿರುದ್ಧ ದೂರು ದಾಖಲಿಸಿದ ಪೊಲೀಸ್ ಅಧಿಕಾರಿಯನ್ನು ಪ್ರತಿವಾದಿ ಆಗಿಸಿದ ಕಾರಣಕ್ಕೆ ಮುಖ್ಯಮಂತ್ರಿ ಸೇರಿ ನಾಲ್ವರಿಗೂ ತಲಾ 10,000 ರೂ. ದಂಡ ವಿಧಿಸಿದೆ.

ದಂಡದ ಹಣವನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಜಮೆ ಮಾಡಿ ಎಂದು ತಿಳಿಸಿದೆ.

ಜನ ಪ್ರತಿನಿಧಿಗಳಿಗೆ ಕಿವಿಮಾತು ಹೇಳಿರುವ ಪೀಠ, ಸಾರ್ವಜನಿಕ ಜೀವನದಲ್ಲಿ ಇರುವವರೇ ಕಾನೂನನ್ನು ಪಾಲಿಸದಿದ್ದರೆ, ಪ್ರಜೆಗಳು ಪಾಲಿಸುತ್ತಾರೆಯೇ? ಎಂದು ಪ್ರಶ್ನಿಸಿದೆ.

ರಸ್ತೆಗಳಲ್ಲಿ ಪ್ರತಿಭಟನೆ ನಡೆಸಿದರೆ ಜನರಿಗೆ ತೊಂದರೆ, ಜನ ಪ್ರತಿನಿಧಿಯಾದ ಕಾರಣಕ್ಕೆ ರಸ್ತೆ ಅಡ್ಡಗಟ್ಟುವುದು ಸರಿಯಲ್ಲ, ಮೊದಲು ನೀವು ಕಾನೂನು ಪಾಲಿಸಿ ಎಂದು ಪೀಠ ಸೂಚಿಸಿದೆ.


**ದಿ ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿ.,**
ಪ್ರಧಾನ ಕಛೇರಿ: ಪೋಸ್ಟ್ ಬಾಕ್ಸ್ ನಂ.217, ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ದಾವಣಗೆರೆ - 577 002,

**-: ಮಾನ್ಯ ಸದಸ್ಯರುಗಳ ಗಮನಕ್ಕೆ :-**

- ದಿನಾಂಕ : 11.02.2024ರ ಭಾನುವಾರದಂದು ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು, ಗುಂಡಿ ಸರ್ಕಲ್ ಹತ್ತಿರ, ದಾವಣಗೆರೆಯಲ್ಲಿ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯು ನಡೆಯಲಿದ್ದು, ಅರ್ಹ ಸದಸ್ಯರು ಚುನಾವಣೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕೆಂದು ಕೋರಲಾಗಿದೆ.
- ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಯಲ್ಲಿ ಮತ ಚಲಾಯಿಸಲು ಕಡ್ಡಾಯವಾಗಿ ಸದಸ್ಯರ ಗುರುತಿನ ಚೀಟಿ ತರಬೇಕಾಗಿದ್ದು ಗುರುತಿನ ಚೀಟಿ ಇಲ್ಲದ ಸದಸ್ಯರು, ಕಛೇರಿ ಸಮಯದಲ್ಲಿ (ಬೆಳಿಗ್ಗೆ 10.30ರಿಂದ ಸಂಜೆ 5.00ರವರೆಗೆ) ಬ್ಯಾಂಕಿನ ಪ್ರಧಾನ ಕಚೇರಿಗೆ ಭೇಟಿ ನೀಡಿ ಗುರುತಿನ ಚೀಟಿ ಪಡೆಯಬಹುದಾಗಿದೆ.

**ಶ್ರೀ ಬಿ.ಎಸ್. ಮಲ್ಲೇಶ್**
**ಪ್ರಧಾನ ವ್ಯವಸ್ಥಾಪಕರು**

# ಒಳಮೀಸಲಾತಿಯಲ್ಲಿ ರಾಜ್ಯಗಳ ಅಧಿಕಾರ ಸುಪ್ರೀಂ ಕೋರ್ಟ್‌ನಿಂದ ಪರಿಶೀಲನೆ ಆರಂಭ



ನವದೆಹಲಿ, ಫೆ. 6 – ಪರಿಶಿಷ್ಟ ಜಾತಿ ಹಾಗೂ ಪಂಗಡಗಳಿಗೆ ನೀಡಲಾಗುವ ಮೀಸಲಾತಿಯಲ್ಲಿ ಒಳಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ಇದೆಯೇ ಎಂಬುದರ ಪರಿಶೀಲನೆ ಯನ್ನು ಸುಪ್ರೀಂ ಕೋರ್ಟ್ ಆರಂಭಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಏಳು ಸದಸ್ಯರ ಸಂವಿಧಾನ ಪೀಠ ಆ ಬಗ್ಗೆ ಪರಿಶೀಲನೆ ನಡೆಸುತ್ತಿದೆ.

ಇದೇ ಪೀಠವು ವಾಲ್ಮೀಕಿ ಹಾಗೂ ಮಝ್ಹಬಿ ಸಿಖ್ ಜಾತಿಗಳಿಗೆ ಮೀಸಲಾತಿಯಲ್ಲಿ ಮೊದಲ ಆದ್ಯತೆ ನೀಡುವ ಪಂಜಾಬ್‌ನ 2006 ರ ಕಾಯ್ದೆಯನ್ನೂ ಪರಿಶೀಲಿಸುತ್ತಿದೆ.

ಈ ಪೀಠದಲ್ಲಿ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ವಿಕ್ರಮ್ ನಾಥ್, ಬೇಲಾ ಎಂ. ತ್ರಿವೇದಿ, ಪಂಕಜ್ ಮಿತ್ತಲ್, ಮನೋಜ್ ಮಿಶ್ರ ಹಾಗೂ ಸತೀಶ್ ಚಂದ್ರ ಮಿಶ್ರ ಅವರಿದ್ದಾರೆ.

2010ರಲ್ಲಿ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನೀಡಿದ ತೀರ್ಪು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ 23 ಅರ್ಜಿಗಳು ದಾಖಲಾಗಿವೆ. ಪಂಜಾಬ್ ಸರ್ಕಾರ ಸಹ ಅರ್ಜಿ ಸಲ್ಲಿಸಿದೆ.

ವಾಲ್ಮೀಕಿ ಹಾಗೂ ಮಝ್ಹಬಿ ಸಿಖ್ ಸಮುದಾಯಕ್ಕೆ ಶೇ.50ರ ಒಳ ಮೀಸಲಾತಿ ನೀಡುವ ಪಂಜಾಬ್ ಸರ್ಕಾರದ ಕ್ರಮವನ್ನು ಸಂವಿಧಾನ ಬಾಹಿರ ಎಂದು ಹೈಕೋರ್ಟ್ ತಿಳಿಸಿತ್ತು. ಈ ಮೀಸಲಾತಿಯು 2004ರಲ್ಲಿ ಸುಪ್ರೀಂ ಕೋರ್ಟ್‌ನ ಐವರು ಸದಸ್ಯರ ಪೀಠ ನೀಡಿದ ತೀರ್ಪಿನ ಉಲ್ಲಂಘನೆ ಎಂದೂ ಹೈಕೋರ್ಟ್ ಹೇಳಿತ್ತು.

ಒಳಮೀಸಲಾತಿ ಕಲ್ಪಿಸುವುದು ಸಂವಿಧಾನದ 14ನೇ ವಿಧಿಯ ಉಲ್ಲಂಘನೆ ಎಂದು ಇ.ವಿ. ಚಿನ್ನಯ್ಯ ವರ್ಸಸ್ ಆಂಧ್ರ ಪ್ರದೇಶ ರಾಜ್ಯದ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು.

ಸಂಸತ್ತಿಗೆ ಮಾತ್ರ ಒಳಮೀಸಲಾತಿ ಕಲ್ಪಿಸುವ ಅಧಿಕಾರ ಇದೆ. ರಾಜ್ಯಗಳಿಗೆ ಈ ಅಧಿಕಾರ ಇಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿತ್ತು.

# ಜಿಲ್ಲಾಧಿಕಾರಿಗಳಿಂದ ವಿವಿಧ ಸ್ಥಳಗಳ ಪರಿಶೀಲನೆ





ದಾವಣಗೆರೆ, ಫೆ. 6 - ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಅವರು ನಗರದ ಮಧ್ಯ ಭಾಗದಲ್ಲಿರುವ ಲೋಕೋಪಯೋಗಿ ಇಲಾಖೆ ಸಿಬ್ಬಂದಿಯವರ ವಸತಿಗೃಹ ಕಟ್ಟಡದ ಪರಿಶೀಲನೆ ನಡೆಸಿ ಸಿಬ್ಬಂದಿಯವರ ಕುಂದು ಕೊರತೆ ವಿಚಾರಿಸಿ ಮೂಲಭೂತ ಸೌಕರ್ಯ ಅಳವಡಿಸಲು ಮತ್ತು ಸಮರ್ಪಕ ನೀರು ಪೂರೈಕೆ ಮಾಡಲು ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಂತರ ನಗರದ ರಾಷ್ಟ್ರೀಯ ಹೆದ್ದಾರಿ ಪಕ್ಕದ ಸರ್ಕ್ಯೂಟ್ ಹೌಸ್ ಪಕ್ಕದಲ್ಲಿರುವ ಜಾಗದಲ್ಲಿ ಅಂಬೇಡ್ಕರ್ ಭವನ ನಿರ್ಮಿಸುವ ಉದ್ದೇಶದಿಂದ ಸ್ಥಳ ಪರಿಶೀಲನೆ ನಡೆಸಿದರು. ಮಹಾನಗರ ಪಾಲಿಕೆ ಆಯುಕ್ತರು ಮತ್ತು ನಗರ ಅಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು, ಲೋಕೋಪಯೋಗಿ ಇಲಾಖೆ ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿದರು.

**ಸಾರ್ವಜನಿಕರು ಕುಂದುಕೊರತೆ ಆಲಿಸಿ, ಜನಸ್ನೇಹಿಯಾಗಿ ಕೆಲಸ ಮಾಡಲು ಡಿ.ಸಿ. ಸೂಚನೆ**

ಎಸ್ಎಸ್ಎಂ ಬಡಾವಣೆಯಲ್ಲಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಖಾಲಿ ಇರುವ ಜಾಗದಲ್ಲಿ ಕಸಾಯಿ ಖಾನೆ ನಿರ್ಮಿಸಲು ನಿಗದಿಪಡಿಸಿರುವ ಜಾಗವನ್ನು ಪರಿಶೀಲಿಸಿದರು. ನಗರದ ಜಿಲ್ಲಾ ಅಗ್ನಿಶಾಮಕ ಕಚೇರಿಗೆ ಭೇಟಿ ನೀಡಿ ಇಲ್ಲಿನ ಕಾರ್ಯವೈಖರಿ ಬಗ್ಗೆ ಪರಿಶೀಲನೆ ನಡೆಸಿ ಕಚೇರಿ ಕಟ್ಟಡದ ಸ್ವಚ್ಛತೆ ಮತ್ತು ಸಿಬ್ಬಂದಿಯವರ ಕುಂದು ಕೊರತೆ ವಿಚಾರಿಸಿ ಜನ ಸ್ನೇಹಿಯಾಗಿ ಜನಪರವಾಗಿ ಕಾರ್ಯನಿರ್ವಹಿಸಲು ಸೂಚಿಸಿದರು.

ಪಾಲಿಕೆ ಆಯುಕ್ತರಾದ ರೇಣುಕಾ, ಕಾರ್ಯಪಾಲಕ ಇಂಜಿನಿಯರ್ ನರೇಂದ್ರಬಾಬು, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಹಾಂತೇಶ್ ಹಾಗೂ ಪಾಲಿಕೆ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಪರಿಶಿಷ್ಟ ಅಭ್ಯರ್ಥಿಗಳ ಆಯ್ಕೆಯಲ್ಲಿ ಪಕ್ಷಪಾತ : ಸಂಸದೀಯ ಸಮಿತಿ

ನವದೆಹಲಿ, ಫೆ. 6 – ಆಯ್ಕೆ ಸಮಿತಿಯ ಪಕ್ಷಪಾತಿ ಧೋರಣೆಯ ಕಾರಣದಿಂದಾಗಿ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಅಭ್ಯರ್ಥಿಗಳನ್ನು ಉದ್ದೇಶಪೂರ್ವಕವಾಗಿ 'ಸೂಕ್ತವಲ್ಲ' ಎಂದು ಬಿಂಬಿಸಲಾಗುತ್ತಿದೆ ಎಂದು ಸಂಸದೀಯ ಸಮಿತಿ ತಿಳಿಸಿದೆ.

ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಅಭಿವೃದ್ಧಿ ಸಮಿತಿ ಲೋಕಸಭೆಗೆ ತನ್ನ ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ ಈ ವಿಷಯ ತಿಳಿಸಲಾಗಿದೆ.

ಸೂಕ್ತ ಸಂಖ್ಯೆಯಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲ ಎಂಬ ಸರ್ಕಾರದ ಉತ್ತರವನ್ನು ಒಪ್ಪಲಾಗದು. ಪರಿಶಿಷ್ಟರಲ್ಲೂ ಪ್ರತಿಭಾವಂತರಿದ್ದಾರೆ ಹಾಗೂ ಅರ್ಹರಿದ್ದಾರೆ. ಆದರೆ, ಅವರನ್ನು ಪಕ್ಷಪಾತದಿಂದ ಕಡೆಗಣಿಸಲಾಗುತ್ತಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಲೋಕಸಭಾ ಸದಸ್ಯ ಕಿರಿತ್ ಪ್ರೇಮ್‌ಜಿ ಭಾಯಿ ಅವರ ನೇತೃತ್ವದ ಸಮಿತಿಯು ಈ ವರದಿ ನೀಡಿದೆ. ಎ.ಐ.ಐ.ಎಂ.ಎಸ್. ದೆಹಲಿಯ ಆಯ್ಕೆ ಸಮಿತಿಯಲ್ಲಿ ಏಳು ಸದಸ್ಯರಿದ್ದು, ಇವರಲ್ಲಿ ಒಬ್ಬರೂ ಪರಿಶಿಷ್ಟ ಸಮುದಾಯಕ್ಕೆ ಸೇರಿದವರಲ್ಲ. ಆಯ್ಕೆ ಸಮಿತಿಯಲ್ಲಿ ಪರಿಶಿಷ್ಟರ ಸಹಭಾಗಿತ್ವ ಇರಬೇಕು ಎಂದು ಸಮಿತಿ ಹೇಳಿದೆ.

ಪ್ರಸಕ್ತ ಸೂಪರ್ ಸ್ಪೆಷಾಲಿಟಿ ವಲಯದಲ್ಲಿ ಮೀಸಲಾತಿ ಅನ್ವಯಿಸುತ್ತಿಲ್ಲ. ಸೂಪರ್ ಸ್ಪೆಷಾಲಿಟಿ ಕೋರ್ಸ್‌ಗಳಿಗೂ ಸಹ ಮೀಸಲಾತಿ ಅನ್ವಯಿಸಬೇಕು ಎಂದು ಸಮಿತಿಯ ವರದಿಯಲ್ಲಿ ತಿಳಿಸಲಾಗಿದೆ.

## ಪರೀಕ್ಷಾ ಅಕ್ರಮ ತಡೆ ಮಸೂದೆಗೆ ಒಪ್ಪಿಗೆ

ನವದೆಹಲಿ, ಫೆ. 6 – ಪರೀಕ್ಷಾ ಅಕ್ರಮಗಳನ್ನು ತಡೆ ಯುವ ಮಸೂದೆಗೆ ಲೋಕಸಭೆ ಒಪ್ಪಿಗೆ ನೀಡಿದೆ. ಪರೀಕ್ಷಾ ಅಕ್ರಮ ಎಸಗುವವರಿಗೆ ಗರಿಷ್ಠ 10 ವರ್ಷ ಜೈಲು ಹಾಗೂ 1 ಕೋಟಿ ರೂ. ದಂಡ ವಿಧಿಸಲು ಈ ಮಸೂದೆಯಲ್ಲಿ ಅವಕಾಶವಿದೆ. ಸಾರ್ವಜನಿಕ ಪರೀಕ್ಷೆಗಳ ಅಕ್ರಮ ತಡೆ ಮಸೂದೆಯನ್ನು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಮಂಡಿಸಿ, ಅರ್ಹ ವಿದ್ಯಾರ್ಥಿಗಳು ಹಾಗೂ ಅಭ್ಯರ್ಥಿಗಳ ರಕ್ಷಣೆಗಾಗಿ ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಹೇಳಿದರು.

## ಪ್ರೊ. ಕಬ್ಬಡ್ಡಿ ಡಿಕೆಎಸ್ ಸ್ಟೋನ್ ಪವರ್ ತಂಡ ಪ್ರಥಮ





ದಾವಣಗೆರೆ, ಫೆ. 6 - ಎಸ್ ಎಸ್ ಎಂ ಮತ್ತು ಮಣಿ ಸರ್ಕಾರ್‌ರವರ ಆಶ್ರಯದಲ್ಲಿ ನಡೆದ ಜಿಲ್ಲಾಮಟ್ಟದ ಹೊನಲು ಬೆಳಕಿನ ಪ್ರೊ. ಕಬ್ಬಡ್ಡಿ 2024 ಮೂರು ದಿನಗಳ ಕಾಲ ನಡೆದ ಪಂದ್ಯಾವಳಿಗಳಲ್ಲಿ ನಗರದಲ್ಲಿ ಮೊದಲ ಬಾರಿಗೆ ಕಬ್ಬಡಿ ಪಂದ್ಯಾವಳಿ ಯಶಸ್ವಿಯಾಗಿ ನಡೆದು, ಈ ಪಂದ್ಯಾವಳಿಯಲ್ಲಿ ದಿನೇಶ್ ಕೆ. ಶೆಟ್ಟಿ ಅವರ ಡಿಕೆಎಸ್ ಸ್ಟೋನ್ ಪವರ್ ತಂಡವು ಪ್ರಥಮ ಬಹುಮಾನವಾಗಿ ಆಕರ್ಷಕ ಟ್ರೋಫಿ ಮತ್ತು ಒಂದು ಲಕ್ಷ ರೂ. ಪಡೆಯಿತು.

**ಎಸ್ಸೆಸ್ - ಎಸ್ಸೆಸ್ಸೆಂ ಅಭಿನಂದನೆ**

ಈ ಕಾರ್ಯಕ್ರಮದಲ್ಲಿ ಸದ್ದಾಂ ಹುಸೇನ್ ಮುಸ್ತಫಾ, ನಿಖಿತ್ ಶೆಟ್ಟಿ, ನಿಧೀಶ್ ಶೆಟ್ಟಿ, ಆಟಗಾರರಾದ ಮನು, ಕಿರಣ್, ಸಾಗರ್, ಮಧು ನಾಯಕ್, ಯೇಸುರಾಜ್, ಸಚಿನ್, ಸುದೀಪ್, ತಿಪ್ಪ, ಪವನ್ ತರಕಾರಿ ನಾಗರಾಜ್, ಭಾನುಪ್ರಕಾಶ್, ಯುವರಾಜ್ ಮತ್ತು ಕ್ರೀಡಾಭಿಮಾನಿಗಳು ಉಪಸ್ಥಿತರಿದ್ದರು.

ದಿನೇಶ್ ಕೆ ಶೆಟ್ಟಿ ಡಿಕೆಎಸ್ ಸ್ಟೋನ್ ಪವರ್ ತಂಡಕ್ಕೆ ಶಾಸಕ ಶಾಮನೂರು ಶಿವಶಂಕರಪ್ಪ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಮತ್ತು ಪ್ರಭಾ ಮಲ್ಲಿಕಾರ್ಜುನ್ ಅವರುಗಳು ಟ್ರೋಫಿ ವಿತರಿಸಿ ಅಭಿನಂದಿಸಿದ್ದಾರೆ.


## ಹಾಕಿ ಆಟಗಾರ ವರುಣ್ ವಿರುದ್ಧ ಅತ್ಯಾಚಾರ ಪ್ರಕರಣ

ನವದೆಹಲಿ, ಫೆ. 6 – ಅರ್ಜುನ್ ಪ್ರಶಸ್ತಿ ಪುರಸ್ಕೃತ ಭಾರತೀಯ ಹಾಕಿ ಆಟಗಾರ ವರುಣ್ ಕುಮಾರ್ ವಿರುದ್ಧ ಪೋಕ್ಸೋ ಕಾಯ್ದೆಯಡಿ ಅತ್ಯಾಚಾರ ಪ್ರಕರಣ ದಾಖಲಿಸಲಾಗಿದೆ. 22 ವರ್ಷದ ಮಹಿಳೆ ದೂರು ದಾಖಲಿಸಿದ್ದು, ಅಪ್ರಾಪ್ತವಾಗಿದ್ದ ಸಂದರ್ಭದಲ್ಲಿ ಹಲವು ಬಾರಿ ಲೈಂಗಿಕ ಶೋಷಣೆ ನಡೆಸಲಾಗಿತ್ತು ಎಂದು ತಿಳಿಸಿದ್ದಾರೆ. 2018ರಲ್ಲಿ ಇನ್‌ಸ್ಟಾಗ್ರಾಂ ಮೂಲಕ ವರುಣ್ ಸಂಪರ್ಕವಾಗಿತ್ತು. ಪರಿಚಯ ಬೆಳೆದ ನಂತರ ಮದುವೆಯಾಗುವುದಾಗಿ ಹೇಳಿ ಹಲವು ಬಾರಿ ಅತ್ಯಾಚಾರ ನಡೆಸಿದ್ದಾಗಿ ಮಹಿಳೆ ದೂರಿದ್ದಾರೆ.

ಬೆಂಗಳೂರಿನ ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾದಲ್ಲಿ ವರುಣ್ ತರಬೇತಿ ಪಡೆಯುತ್ತಿದ್ದಾಗ ಭೇಟಿ ಮಾಡಿದ್ದೆ ಎಂದು ಮಹಿಳೆ ತಿಳಿಸಿದ್ದಾರೆ. 2021ರಲ್ಲಿ ವರುಣ್‌ಗೆ ಅರ್ಜುನ್ ಪ್ರಶಸ್ತಿ ನೀಡಲಾಗಿತ್ತು. ಇತ್ತೀಚೆಗೆ ಅವರು ಪಂಜಾಬ್ ಪೊಲೀಸ್‌ನಲ್ಲಿ ಡಿ.ಎಸ್.ಪಿ. ಆಗಿ ಬಡ್ತಿ ಪಡೆದಿದ್ದರು.

ಮಹಿಳೆ ನೀಡಿದ ದೂರು ಆಧರಿಸಿ ಪೋಕ್ಸೋ ಕಾಯ್ದೆಯಡಿ ಅತ್ಯಾಚಾರ ಹಾಗೂ ವಂಚನೆ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಬೆಂಗಳೂರು ಪೊಲೀಸರು ತಿಳಿಸಿದ್ದಾರೆ. ವರುಣ್ ಪ್ರಸಕ್ತ ಟೋಕಿಯೋ ಒಲಂಪಿಕ್ಸ್ ಸಂಭವನೀಯರ ಪಟ್ಟಿಯಲ್ಲಿದ್ದಾರೆ. ಭುವನೇಶ್ವರದಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಭಾರತೀಯ ತಂಡ ಫೆಬ್ರವರಿ 10ರಂದು ಸ್ಪೇನ್‌ನಲ್ಲಿ ನಡೆಯಲಿರುವ ಪಂದ್ಯಾವಳಿಗಾಗಿ ತೆರಳಲಿದೆ.

## 10 ರಂದು ಜಾಹ್ನವಿ ಅವರ ಪುಸ್ತಕ ಬಿಡುಗಡೆ, ರಂಗ ಪ್ರಸ್ತುತಿ



ದಾವಣಗೆರೆ, ಫೆ. 6- ವಿದ್ಯಾನಗರ ಕನ್ನಡ ಭವನದಲ್ಲಿ ಇದೇ ದಿನಾಂಕ 10.02.2024ರ ಶನಿವಾರ ಬಿ.ಟಿ. ಜಾಹ್ನವಿ ಅವರ ಸಮಗ್ರ ಕಥಾ ಸಂಕಲನ 'ಒಬ್ರು ಸುದ್ಯಾಕೆ ಒಬ್ರು ಗದ್ಲ್ಯಾಕೆ' ಪುಸ್ತಕ ಬಿಡುಗಡೆ ಮತ್ತು ಕೆ.ವಿ. ಅಕ್ಷರ ಹೆಗ್ಗೋಡು ಇವರ ಮಾರ್ಗದರ್ಶನದಲ್ಲಿ ವಿದ್ಯಾ ಅಕ್ಷರ ಮತ್ತು ವಾಣಿ ಸತೀಶ್ ಇವರಿಂದ 'ದೂಪ್ದಳ್ಳಿ ಸೆಕ್ಸಿ ದುರುಗ' ರಂಗ ಪ್ರಸ್ತುತಿ ನಡೆಯಲಿದೆ. ಮಾನವ ಬಂಧುತ್ವ ವೇದಿಕೆಯ ರಾಜ್ಯ ಘಟಕದ ಸಂಚಾಲಕ ಪ್ರೊ. ಎ.ಬಿ. ರಾಮಚಂದ್ರಪ್ಪ ಅಧ್ಯಕ್ಷತೆ ವಹಿಸುವರು. ಮೈಸೂರಿನ ಸಾಹಿತಿ ಜಿ.ಪಿ. ಬಸವರಾಜು ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಲೇಖಕರು ಹಾಗೂ ಪ್ರಾಧ್ಯಾಪಕ ತುಮಕೂರಿನ ಡಾ. ರವಿಕುಮಾರ ನೀಹ ಪುಸ್ತಕ ಕುರಿತು ಮಾತನಾಡಲಿದ್ದು, ಕತೆಗಾರ್ತಿ ಬಿ.ಟಿ. ಜಾಹ್ನವಿ ಅವರ ಉಪಸ್ಥಿತಿಯಲ್ಲಿ ಸಾಹಿತಿ ಸೌಮ್ಯ ಕೋಡೂರು, ಕೌದಿ ಪ್ರಕಾಶನದ ಡಾ. ಮಮತ ಅತಿಥಿಗಳಾಗಿ ಉಪಸ್ಥಿತರಿರುವರು.

## ತುಂಗಭದ್ರಾ ನದಿಗೆ ನೀರು : ಸಾರ್ವಜನಿಕರು ಎಚ್ಚರದಿಂದಿರಲು ಸೂಚನೆ

ದಾವಣಗೆರೆ, ಫೆ. 6 - ಬಹುಗ್ರಾಮ ಕುಡಿಯುವ ನೀರು ಯೋಜನೆ, ಜಾತ್ರಾ ಮಹೋತ್ಸವದ ಉದ್ದೇಶದಿಂದ ಭದ್ರಾ ಜಲಾಶಯದಿಂದ ತುಂಗಭದ್ರಾ ನದಿಗೆ ನೀರು ಹರಿಸಲಾಗುತ್ತಿದ್ದು, ಸಾರ್ವಜನಿಕರು ನದಿ ದಂಡೆಗೆ ಬಾರದಂತೆ, ದಾಟದಂತೆ ಎಚ್ಚರಿಕೆ ವಹಿಸಬೇಕೆಂದು ಭದ್ರಾ ಜಲಾಶಯದ ನೀರಾವರಿ ಸಲಹಾ ಸಮಿತಿ ಸದಸ್ಯ ಕಾರ್ಯದರ್ಶಿ ಹಾಗೂ ಅಧೀಕ್ಷಕ ಇಂಜಿನಿಯರ್ ತಿಳಿಸಿದ್ದಾರೆ.

ನದಿಗೆ ಫೆ. 5 ರಿಂದ 10ರ ವರೆಗೆ ಪ್ರತಿದಿನ 2 ಸಾವಿರ ಕ್ಯೂಸೆಕ್ಸ್ ಮತ್ತು ಫೆ.18 ರಿಂದ 23 ರ ವರೆಗೆ ಪ್ರತಿದಿನ 500 ಕ್ಯೂಸೆಕ್ಸ್ ನೀರನ್ನು ಹರಿಸಲಾಗುತ್ತದೆ. ಹಾವೇರಿ, ಗದಗ ಮತ್ತು ಬೆಟಗೇರಿ, ರಾಣೇಬೆನ್ನೂರು, ಬ್ಯಾಡಗಿ, ಕೂಡ್ಲಿಗಿ, ಕೊಟ್ಟೂರು, ಹಗರಿಬೊಮ್ಮನಹಳ್ಳಿ ಮತ್ತು ಹಿರೇಕೆರೂರು ಪಟ್ಟಣಗಳಿಗೆ ಅಲ್ಲದೇ ನದಿಯ ಪಕ್ಕದಲ್ಲಿ ಬರುವ ಗ್ರಾಮಗಳಿಗೆ ಹೂವಿನಹಡಗಲಿ ತಾಲ್ಲೂಕಿನ ಮೈಲಾರ ಗ್ರಾಮದ ಶ್ರೀ ಮೈಲಾರ ಲಿಂಗೇಶ್ವರ ಸ್ವಾಮಿಯ ವಾರ್ಷಿಕ ಕಾರಣಿಕೋತ್ಸವದ ಪ್ರಯುಕ್ತ ಭದ್ರಾ ಜಲಾಶಯದಿಂದ ತುಂಗಭದ್ರಾ ನದಿಗೆ ಕುಡಿಯುವ ನೀರಿಗಾಗಿ ನೀರು ಹರಿಸಲಾಗುವುದು. ಆದರೆ ಅನಧಿಕೃತ ಪಂಪ್‌ಸೆಟ್‌ಗಳ ಮೂಲಕ ನೀರೆತ್ತುವುದನ್ನು ನಿಷೇಧಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

## ಅಜಿತ್ ಬಣವೇ ನಿಜವಾದ ಎನ್.ಸಿ.ಪಿ

ನವದೆಹಲಿ, ಫೆ. 6 – ಅಜಿತ್ ಪವಾರ್ ನೇತೃತ್ವದ ಬಣವೇ ನಿಜವಾದ ಎನ್.ಸಿ.ಪಿ. ಎಂದು ಚುನಾವಣಾ ಆಯೋಗ ಘೋಷಿಸಿದೆ. ಇದು ಶರದ್ ಪವಾರ್ ಅವರಿಗೆ ಪ್ರಮುಖ ಹಿನ್ನಡೆಯಾಗಿದೆ. ಅಜಿತ್ ಪವಾರ್ ಬಣಕ್ಕೆ ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿಯ 'ಗಡಿಯಾರ' ಚಿಹ್ನೆ ನೀಡಿ ಚುನಾವಣಾ ಆಯೋಗ ಆದೇಶ ಹೊರಡಿಸಿದೆ. ಚುನಾವಣಾ ಆಯೋಗದ ನಿರ್ಧಾರ ಪ್ರಜಾಪ್ರಭುತ್ವದ ಹತ್ಯೆ ಎಂದು ಶರದ್ ಪವಾರ್ ಬಣ ಆರೋಪಿಸಿದೆ. ಈ ವಿಷಯದ ಬಗ್ಗೆ ಸುಪ್ರೀಂ ಕೋರ್ಟ್ ಮೊರೆ ಹೋಗಲಾಗುವುದು ಎಂದು ಪವಾರ್ ಬಣದ ನಾಯಕ ಅನಿಲ್ ದೇಶಮುಖ್ ಹೇಳಿದ್ದಾರೆ.

## ಆನಗೋಡು : ಕೃಷಿ ಹೊಂಡ ನಿರ್ಮಾಣಕ್ಕೆ ಶಾಸಕ ಬಸವಂತಪ್ಪ ಗುದ್ದಲಿ ಪೂಜೆ



ದಾವಣಗೆರೆ, ಫೆ.6- ದಾವಣಗೆರೆ ತಾಲ್ಲೂಕು ಆನಗೋಡು ಗ್ರಾಮದಲ್ಲಿ ಕೃಷಿ ಭಾಗ್ಯ ಯೋಜನೆಯಡಿ ಫಲಾನುಭವಿ ರೈತರಾದ ವಿಶ್ವವಿಜೇತ ಇವರ ಜಮೀನಿನಲ್ಲಿ ಕೃಷಿ ಹೊಂಡ ನಿರ್ಮಾಣಕ್ಕೆ ಮಾಯಕೊಂಡ ಶಾಸಕ ಕೆ.ಎಸ್ ಬಸವಂತಪ್ಪ ಗುದ್ದಲಿ ಪೂಜೆ ನೆರವೇರಿಸಿದರು.

ಸರ್ಕಾರವು ಮಳೆ ಬರದ ವೇಳೆ ನೀರನ್ನು ಸಂಗ್ರಹಿಸಿ ಬೆಳೆ ಸಂರಕ್ಷಣೆ ಮಾಡಲು ಕೃಷಿ ಭಾಗ್ಯ ಯೋಜನೆಯನ್ನು ಜಾರಿಗೊಳಿಸಿದೆ. ರೈತರು ತಮ್ಮ ಜಮೀನಿನಲ್ಲಿ ಕೃಷಿ ಹೊಂಡ, ಬದು ನಿರ್ಮಾಣ, ಕೃಷಿ ಹೊಂಡಗಳಿಗೆ ಪಾಲಿಥಿನ್ ಹೊದಿಕೆ ಮತ್ತು ತಂತಿ ಬೇಲಿ, ತುಂತುರು ನೀರಾವರಿ ಘಟಕ ಹಾಗೂ ಡೀಸೆಲ್ ಪಂಪ್‌ಸೆಟ್ ಗಳನ್ನು ಸಹಾಯಧನದಡಿಯಲ್ಲಿ ಅಳವಡಿಸಿಕೊಳ್ಳಲು ಅವಕಾಶವಿದೆ. ಎಲ್ಲಾ ರೈತರು ಕೃಷಿ ಭಾಗ್ಯ ಯೋಜನೆ ಸೌಲಭ್ಯ ಪಡೆದು ಲಾಭದಾಯಕ ಕೃಷಿಯಲ್ಲಿ ತೊಡಗಿಸಿಕೊಳ್ಳಬೇಕೆಂದು ಅವರು ರೈತರಿಗೆ ತಿಳಿಸಿದರು.

ಕೃಷಿ ಸಹಾಯಕ ನಿರ್ದೇಶಕ ಡಿ.ಎಂ. ಶ್ರೀಧರಮೂರ್ತಿ ಮಾತನಾಡಿ, ಕೃಷಿ ಭಾಗ್ಯ ಯೋಜನೆಯಡಿ ಮಾರ್ಗಸೂಚಿಯನ್ವಯ 6 ಘಟಕಗಳನ್ನು ರೈತರು ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕು. ಆಗ ಮಾತ್ರ ಈ ಯೋಜನೆ ಪಡೆಯಬಹುದಾಗಿದೆ ಎಂದರು

ಕೃಷಿ ಅಧಿಕಾರಿ ಆರ್. ಶ್ರೀನಿವಾಸ್, ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಚಂದ್ರಮ್ಮ, ಪಂಚಾಯಿತಿ ಸದಸ್ಯರಾದ ಬಸವರಾಜಪ್ಪ, ಎಸ್.ಬಿ. ಯೋಗೇಶಪ್ಪ, ಹುಣಿಹಳ್ಳಿ ಚಂದ್ರಪ್ಪ, ಆರ್.ವಿ. ತೇಜವರ್ಧನ್, ಕರಿಬಸಪ್ಪ, ಕಲ್ಲೇಶ್, ಸುರೇಶ್ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.


ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ

ಆಡಳಿತ ಮಂಡಳಿ ಚುನಾವಣೆ-2024




ಮಾನ್ಯ ಗೌರವಾನ್ವಿತ ಷೇರುದಾರರೇ, ಗುರು-ಹಿರಿಯರೇ, ಆತ್ಮೀಯ ಸ್ನೇಹಿತರೇ ಹಾಗೂ ಬಂಧು-ಮಿತ್ರರೇ, ದಿನಾಂಕ 11.02.2024ರ ಭಾನುವಾರ ನಡೆಯಲಿರುವ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಗೆ ಬಾದಾಮಿ ಜಯಣ್ಣ ಆದ ನಾನು ನಾಮಪತ್ರ ಸಲ್ಲಿಸಿದ್ದೇನು. ಹಿರಿಯರ ಮಾತಿಗೆ ಮನ್ನಣೆ ನೀಡಿ ನಾನು ಇಂದು ನಾಮಪತ್ರವನ್ನು ಹಿಂಪಡೆದಿದ್ದೇನೆ. ಇಲ್ಲಿಯವರೆಗೂ ನನಗೆ ಸಹಕರಿಸಿದ ಬ್ಯಾಂಕಿನ ಸದಸ್ಯರಿಗೂ, ಮಿತ್ರರಿಗೂ, ಎಲ್ಲಾ ಷೇರುದಾರರಿಗೂ, ಬಂಧುಗಳಿಗೂ, ಹಿತೈಷಿಗಳಿಗೆ ತುಂಬು ಹೃದಯದ ಕೃತಜ್ಞತೆಗಳು. ತಮ್ಮ ಅಗಾಧವಾದ ಪ್ರೀತಿಗೆ ನಾನು ಸದಾ ಕಾಲ ಚಿರಋಣಿಯಾಗಿರುತ್ತೇನೆ ಇದೇ ರೀತಿ ತಮ್ಮ ಪ್ರೀತಿ ವಿಶ್ವಾಸ ನಿಮ್ಮ ಆಶೀರ್ವಾದ ನನ್ನ ಜೊತೆ ಜೊತೆಯಲ್ಲೇ ಇರಲಿ ಎಂದು ಆಶಿಸುತ್ತಾ ಮತ್ತೊಮ್ಮೆ ನಿಮಗೆ ಹೃತ್ಪೂರ್ವಕವಾದ ಧನ್ಯವಾದಗಳು ತಿಳಿಸುತ್ತೇನೆ.

✦ ಖಜಾಂಚಿ, ದಾವಣಗೆರೆ ಜಿಲ್ಲಾ ಯೋಗ ಒಕ್ಕೂಟ ✦ ಕಾರ್ಯಾಧ್ಯಕ್ಷರು, ಪಂಚಮಸಾಲಿ ಜಿಲ್ಲಾ ಯುವ ಘಟಕ
✦ ಸದಸ್ಯರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
✦ ನಿರ್ದೇಶಕರು, ಸಂಕಲ್ಪ ಸೇವಾ ಟ್ರಸ್ಟ್ ✦ ನಿರ್ದೇಶಕರು, ದಾವಣಗೆರೆ ಟೆಕ್ಸ್‌ಟೈಲ್ಸ್ ಅಸೋಸಿಯೇಷನ್
✦ ಶ್ರೀ ಕುರುವತ್ತಿ ಬಸವೇಶ್ವರ ರೆಡಿಮೇಡ್ ಗಾರ್ಮೆಂಟ್ಸ್ ಮತ್ತು ವಾಷಿಂಗ್ ಯುನಿಟ್, ಪ್ಲಾಟ್ ನಂ 19, ಕರೂರ್ ಇಂಡಸ್ಟ್ರಿಯಲ್ ಏರಿಯಾ, ದಾವಣಗೆರೆ.
✦ ಶ್ರೀ ಸಾಯಿ ಕ್ರಿಯೇಷನ್, ಸಿದ್ಧ ಉಡುಪುಗಳ ತಯಾರಕರು, # 474, ಕೆಂಚಾಂಬ ಕಾಂಪ್ಲೆಕ್ಸ್, ನಿಟುವಳ್ಳಿ, ✦ ಶ್ರೀ ಸಾಯಿ ಗಾರ್ಮೆಂಟ್ಸ್, ಕ್ಲಾತ್ ಮರ್ಚಂಟ್ಸ್, ನಿಟುವಳ್ಳಿ, ದಾವಣಗೆರೆ.
✦ ಶ್ರೀ ಸಾಯಿ ಗಾರ್ಮೆಂಟ್ಸ್ ಸಿದ್ಧ ಉಡುಪುಗಳ ತಯಾರಕರು, ಭಾನುವಳ್ಳಿ. ✦ ಶ್ರೀ ಸಾಯಿ ಗಾರ್ಮೆಂಟ್ಸ್, ಕ್ಲಾತ್ ಮರ್ಚಂಟ್ಸ್, ಗರಡಿ ಮನೆ ಹತ್ತಿರ, ಭಾನುವಳ್ಳಿ.
✦ ಬಸವೇಶ್ವರ ರೆಡಿಮೇಡ್ ಗಾರ್ಮೆಂಟ್ಸ್ ಸಿದ್ಧ ಉಡುಪುಗಳ ತಯಾರಕರು, ಪ್ಲಾಟ್ ನಂ 38, ಡಿ.ಸಿ. ಆಫೀಸ್ ಹತ್ತಿರ, ದಾವಣಗೆರೆ.


## ಸಂಸತ್ ಅಧಿವೇಶನ ಶನಿವಾರದವರೆಗೆ ವಿಸ್ತರಣೆ

ನವದೆಹಲಿ, ಫೆ. 6 – ಪ್ರಸಕ್ತ ನಡೆಯುತ್ತಿರುವ ಸಂಸತ್ತಿನ ಬಜೆಟ್ ಅಧಿವೇಶನವನ್ನು ಶನಿವಾರದವರೆಗೆ ವಿಸ್ತರಿಸಲಾಗುವುದು ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಷಿ ಹೇಳಿದ್ದಾರೆ.

2014ಕ್ಕೆ ಮುಂಚೆ ಹಾಗೂ ನಂತರದ ಅವಧಿಯ ಆರ್ಥಿಕ ಪರಿಸ್ಥಿತಿ ಹೋಲಿಕೆ ಮಾಡುವ ಶ್ವೇತಪತ್ರ ಮಂಡಿಸುವ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಹಿಂದೆ ಫೆಬ್ರವರಿ 9ರವರೆಗೆ ಅಧಿವೇಶನ ನಡೆಸಲು ಉದ್ದೇಶಿಸಲಾಗಿತ್ತು. ಅದನ್ನು ಒಂದು ದಿನ ವಿಸ್ತರಿಸಲಾಗಿದೆ.

ಸಾಮಾನ್ಯವಾಗಿ ವಾರಾಂತ್ಯಗಳಲ್ಲಿ ಸಂಸತ್ ಅಧಿವೇಶನ ನಡೆಯುವುದಿಲ್ಲ. ಆದರೆ, ಈ ಹಿಂದೆ ಶನಿವಾರವೂ ಕಲಾಪಗಳನ್ನು ನಡೆಸಿದ ಉದಾಹರಣೆ ಇದೆ.



ದಿ ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿ. ದಾವಣಗೆರೆ

ಆಡಳಿತ ಮಂಡಳಿ ಚುನಾವಣೆ 2024



ತಮ್ಮ ಸೇವಾಕಾಂಕ್ಷಿ
ಜಂಬಗಿ ರಾದೇಶ
ಜಿಎಸ್‌ಟಿ ಮತ್ತು ಆದಾಯ ತೆರಿಗೆ ಸಲಹೆಗಾರರು
ಮೊ : 94482 16089

ಮಾನ್ಯ ಸದಸ್ಯರಲ್ಲಿ ಮನವಿ,
ದಿನಾಂಕ 11.02.2024ರ ಭಾನುವಾರ ನಡೆಯಲಿರುವ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನದ ಚುನಾವಣೆಯಲ್ಲಿ
**ಜಂಬಗಿ ರಾದೇಶ**
ಆದ ನಾನು ಗುರು-ಹಿರಿಯರ ಹಾಗೂ ತಮ್ಮೆಲ್ಲರ ಆಶೀರ್ವಾದದೊಂದಿಗೆ ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದು, ಈ ಹಿಂದೆ ನಮ್ಮ ತಂದೆಯವರಾದ **ದಿ. ಜಂಬಗಿ ಶರಣಪ್ಪನವರು ಬ್ಯಾಂಕಿನ ಅಧ್ಯಕ್ಷರಾಗಿ ಸರ್ವತೋಮುಖ ಶ್ರೇಯೋಭಿವೃದ್ಧಿ ಪಡಿಸಿರುತ್ತಾರೆ.** ಅವರ ಮಗನಾದ ನಾನೂ ಸಹ ಅದೇ ಧ್ಯೇಯವನ್ನು ಇಟ್ಟುಕೊಂಡು ಬ್ಯಾಂಕಿನ ಸದಸ್ಯರ ಸರ್ವತೋಮುಖ ಏಳಿಗೆಗಾಗಿ ಶ್ರಮಿಸಲಿದ್ದು, ಇನ್ನೂ ಹೆಚ್ಚಿನ ಅಭಿವೃದ್ಧಿಗಾಗಿ ಉತ್ಸುಕನಾಗಿದ್ದೇನೆ. ಆದ್ದರಿಂದ ತಮ್ಮಗಳ ಸೇವೆ ಮಾಡುವ ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಈ ನನ್ನ ಸ್ಪರ್ಧೆಗೆ ನಿಮ್ಮ ಅತಿ ಅಮೂಲ್ಯವಾದ ಮತವನ್ನು ನನಗೂ ಒಂದು ನೀಡಿ ನನ್ನನ್ನು ಪ್ರಚಂಡ ಬಹುಮತದಿಂದ ಆರಿಸಿ ನಿಮ್ಮೆಲ್ಲರ ಸೇವೆಯನ್ನು ಮಾಡಲು ಅವಕಾಶ ಮಾಡಿಕೊಡಬೇಕಾಗಿ ಪ್ರೀತಿಯಿಂದ ಕೇಳಿಕೊಳ್ಳುತ್ತೇನೆ.



ದಿ. ಜಂಬಗಿ ಶರಣಪ್ಪ

ಶುಭ ಕೋರುವವರು : ದಿ. ಜಂಬಿಗಿ ಶರಣಪ್ಪನವರ ಸ್ನೇಹಿತರುಗಳು ಮತ್ತು ವ್ಯಾಪಾರಸ್ಥರು

| 10 | ಜಂಬಗಿ ರಾದೇಶ | | |
|---|---|---|---|

ದಯವಿಟ್ಟು ಸೀರಿಯಲ್ ನಂಬರ್ 10 ಕ್ಕೆ ಒಂದು ಮತ ಕೊಟ್ಟು ಜಯಶೀಲರನ್ನಾಗಿ ಮಾಡಿ.

ದಿನಾಂಕ 11.02.2024 ನೇ ಭಾನುವಾರ, ಸಮಯ : ಬೆಳಿಗ್ಗೆ 9 ರಿಂದ ಸಂಜೆ 4 ರವರೆಗೆ,
ಸ್ಥಳ : ಮೋತಿ ವೀರಪ್ಪ ಕಾಲೇಜು ಆವರಣ, ದಾವಣಗೆರೆ.



ನಂಜಪ್ಪ ಹಾಸ್ಪಿಟಲ್ಸ್

ಕೀಲು ನೋವು ನಿಮ್ಮನ್ನು ನಿಧಾನಿಸುತ್ತಿದೆಯೇ?

ಇದು ಸಂಧಿವಾತವಾಗಿರಬಹುದು
- ಊದಿಕೊಂಡ ಕೀಲುಗಳು
- ಕೀಲುಗಳಲ್ಲಿ ಬಿಗಿತ
- ಕೈ ಕಾಲುಗಳು ಮರಗಟ್ಟುವುದು



ಸಂಧಿವಾತಶಾಸ್ತ್ರಜ್ಞರನ್ನು (ರುಮಟಾಲಾಜಿಸ್ಟ್) ಸಂಪರ್ಕಿಸಿ ಪ್ರತಿ ಬುಧವಾರ

08192-260111/260222/260333 | ಮಾಗನೂರು ಬಸಪ್ಪ ರಸ್ತೆ ತರಳಬಾಳು ಬಡಾವಣೆ, ದಾವಣಗೆರೆ